# ಅಧ್ಯಾಯ ೨

## ಕರ್ನಾಟಕ : ಒಂದು ವಿಹಂಗಮ ನೋಟ

**ಪೀಠಿಕೆ :**

*ಪೂಗಳಕಂಪು ಮಾರುತನತಂಪು ಗಿಡಗಳಗುಂಪು ಕೋಕಿಲಾ ।*
*ರಾಗದಲಂಪು ನೀರೆಯರಪೆಂಪು ವನಂಗಳ ಸೊಂಪಿನಿಂದಮಾ ॥*
*ಭೋಗದಗೊತ್ತು ಯೋಗಿಗಳ ಬಿತ್ತು ವಿಲಾಸಿನಿ ಭಾರತಾಂಬೆಯಾ ।*
*ಮೂಗುತಿನತ್ತು ನೋಡಿದೊಡೆ ಕನ್ನಡದೊಡೆ ಕನ್ನಡನಾಡಿದು ವೈಭವಾನ್ವಿತಂ ॥*

(ಶೂಲಪಾಣಿ)

ಭಾರತಾಂಬೆಯ ಮೂಗಿನ ನತ್ತಿನಂತಿರುವ ಕರ್ನಾಟಕಕ್ಕೆ ತನ್ನದೇ ಆದ ಚರಿತ್ರೆಯಿದೆ, ಪರಂಪರೆಯಿದೆ, ಸಂಸ್ಕೃತಿ ಇದೆ. 'ಕರುನಾಡು' ಎಂದರೆ ಎತ್ತರವಾದ ದೇಶ, 'ಕರಿಯನಾಡು' ಎಂದರೆ ಕಪ್ಪು ಮಣ್ಣಿನಿಂದ ಕೂಡಿದ ದೇಶ ಎಂಬ ಅರ್ಥದಲ್ಲಿ 'ಕರ್ನಾಟಕ' ಎಂಬ ಶಬ್ದ ಹುಟ್ಟಿದೆಯೆಂಬುದಕ್ಕೆ ಎರಡು ಮಾತಿಲ್ಲ. "ಕರ್ಣಯೋಃ ಅಟತಿ ಇತಿ ಕರ್ಣಾಟಃ" ಎಂದು ವೆಂಕಟಾಧ್ವರಿಯು ಸಂಸ್ಕೃತದಲ್ಲಿ ಹೇಳಿರುವುದಿದೆ. ಇದರ ಅರ್ಥ "ಕೀರ್ತಿಶಾಲಿಯಾದ ದೇಶ" ಎಂಬುದು. ಆದ್ದರಿಂದ ಎತ್ತರವಾದ, ಕಪ್ಪುಮಣ್ಣಿನಿಂದ ಕೂಡಿದ ಕೀರ್ತಿಶಾಲಿಯಾದ ದೇಶ ಕರ್ನಾಟಕ. "ಕಮ್ಮಿತುನಾಡು, ಕನ್ನಾಡು, ಕನ್ನಡು, ಕನ್ನಡನಾಡು" ಎಂಬೆಲ್ಲ ಅರ್ಥದಲ್ಲಿ ಕೆಲವು ವಿದ್ವಾಂಸರು ವ್ಯಾಖ್ಯಾನ ಮಾಡಿರುವುದಿದೆ. ಅದೇನೇ ಇರಲಿ – ಎತ್ತರವಾದ ಕಪ್ಪು ಮಣ್ಣಿನಿಂದ ಕೂಡಿದ ಕೀರ್ತಿಶಾಲಿಯಾದ ನಾಡು – ಕರ್ನಾಟಕ.

**ಭೌಗೋಳಿಕ :**

ನಾಡು – ಕರ್ನಾಟಕ. 'ಕನ್ನಡ' ಕರ್ನಾಟಕ ಜನತೆಯ ಭಾಷೆ. ಅಂದರೆ ಕನ್ನಡವನ್ನು ಪ್ರಧಾನವಾಗಿ ಮಾತಾಡುವ ಜನರಿರುವ ಪ್ರದೇಶ 'ಕರ್ನಾಟಕ'. ಇದರಿಂದ 'ಕರ್ನಾಟಕ' ಮತ್ತು 'ಕನ್ನಡ' ಸಮಾನಾರ್ಥ ಶಬ್ದಗಳು ಎಂಬುದನ್ನು ಮರೆಯಬಾರದು. ಬಹಳ ಹಿಂದೆ ಕನ್ನಡ ಭಾಷೆಯನ್ನಾಡುವ ಪ್ರದೇಶಗಳಲ್ಲಿ ಕರ್ನಾಟಕ, ಮಹಾರಾಷ್ಟ್ರ,

ಲಾಟ, ಕುಂತಳ, ಕೊಂಕಣ ಇವೇ ಮುಂತಾದವು ಸೇರಿಕೊಂಡಿದ್ದವು. ಮುಂದೆ ಬರುಬರುತ್ತ 'ಕರ್ನಾಟಕ' ಎಂಬ ಭಾಗವೇ ಹೆಚ್ಚು ಪ್ರಬಲವಾದ್ದರಿಂದ ಅದೇ ಹೆಸರು ಕನ್ನಡ ದೇಶಕ್ಕೆಲ್ಲ ಪಸರಿಸಿತು.

ಕರ್ನಾಟಕವನ್ನು ಕುರಿತು ನಮಗೆ ಮಹಾಭಾರತ, ರಾಮಾಯಣ ಹಾಗೂ ಜೈನ ಪುರಾಣಗಳಲ್ಲಿ ಅತಿ ಪುರಾತನ ಉಲ್ಲೇಖಗಳು ಸಿಗುತ್ತವೆ. ಪೌರಾಣಿಕ ವ್ಯಕ್ತಿಗಳಾದ ಪರಶುರಾಮ ಹಾಗೂ ಹನುಮಂತ ಇವರ ಜನ್ಮಭೂಮಿ ಕರ್ನಾಟಕ ಎನ್ನುವವರಿದ್ದಾರೆ.

ರಾಮಾಯಣದ ವಾಲಿ ಸುಗ್ರೀವರ ರಾಜಧಾನಿ ಬಳ್ಳಾರಿ ಜಿಲ್ಲೆಯ ಹಂಪೆ ಎನ್ನಲಾಗುತ್ತಿದೆ. ನೃಪತುಂಗನ ಕವಿರಾಜಮಾರ್ಗದಲ್ಲಿ ಈ ನಾಡು ಗೋದಾವರಿಯಿಂದ ಕಾವೇರಿಯವರೆಗೆ ಹರಡಿತ್ತು ಎಂದು ವಿವರಿಸಲಾಗಿದೆ :

***ಕಾವೇರಿಯಿಂದಮಾ ಗೋ***
***ದಾವರಿವರಮಿರ್ದ ನಾಡದಾ ಕನ್ನಡದೊಳ್***
***ಭಾವಿಸದ ಜನಪದಂ ವಸು***
***ಧಾವಳಯವಿಲೀನವಿಶದ ವಿಷಯ ವಿಶೇಷಂ ॥***

**(ಕವಿರಾಜಮಾರ್ಗ 1–36)**

ಅಂದರೆ ಒಂಭತ್ತನೆ ಶತಮಾನದಲ್ಲಿ ಕನ್ನಡಭಾಷೆ ಉತ್ತರದ ಗೋದಾವರಿಯಿಂದ, ದಕ್ಷಿಣದ ಕಾವೇರಿಯವರೆಗೆ ಹಬ್ಬಿತ್ತು ಎಂಬುದು ಖಚಿತವಾಯಿತು. ಇಂದು ಇದರ ವಿಸ್ತೀರ್ಣವು ಅಷ್ಟಿಲ್ಲ. ಕರ್ನಾಟಕವು ಇಂದು ಸುಮಾರು ಎರಡು ಲಕ್ಷ ಚದರ ಕಿ.ಮೀ. ಪ್ರದೇಶವನ್ನು ಒಳಗೊಂಡಿದೆ. ಜನಸಂಖ್ಯೆ ಸರಿಸುಮಾರು ಏಳೆಂಟು ಕೋಟಿಯಷ್ಟಿದೆ. ಇವರಲ್ಲಿ ಶೇ.70 ಗ್ರಾಮೀಣ ಪ್ರದೇಶದಲ್ಲಿದ್ದಾರೆ. ಆದರೆ ಪಟ್ಟಣಗಳಿಗೆ ವಲಸೆ ಹೋಗುವವರ ಸಂಖ್ಯೆ ದಿನೇದಿನೇ ಹೆಚ್ಚಾಗುತ್ತಿದೆ. ಶೇ.66 ಮಂದಿಯ ಮಾತೃಭಾಷೆ ಕನ್ನಡ. ಕನ್ನಡ ಭಾಷೆ ತಿಳಿಯದೆ ಇರುವವರು ಕೆಲವೇ ಕೆಲವು ಮಂದಿ ಎಂದು ಹೇಳಬಹುದು ಭಾರತದ ಇತರೆಡೆ ಇರುವಂತೆ ಇಲ್ಲೂ ಜಾತಿವ್ಯವಸ್ಥೆ ಪ್ರಬಲವಾಗಿದೆ. ಲಿಂಗಾಯಿತರು ಶೇ.15, ಒಕ್ಕಲಿಗರು ಶೇ.12ರಷ್ಟು ಇದ್ದಾರೆ. ಐವರಲ್ಲಿ ಒಬ್ಬರು ಪರಿಶಿಷ್ಟಜಾತಿ ಹಾಗೂ ಬುಡಕಟ್ಟಿಗೆ ಸೇರಿದವರಾಗಿದ್ದಾರೆ.

ಭೌಗೋಳಿಕವಾಗಿ, ಪ್ರಾಕೃತಿಕವಾಗಿ ಕರ್ನಾಟಕ ವಿಸ್ತಾರವಾಗಿ ಬೆಳೆದು ತನ್ನ ಸಂಸ್ಕೃತಿಯ ಸುಗಂಧವನ್ನು ಸುತ್ತೆಲ್ಲಾ ಎರಚಿ, ಚಾರಿತ್ರಿಕವಾಗಿ ಬೆಳೆಯುತ್ತಿದ್ದ ಕಾಲದಲ್ಲಿ ಅನೇಕ ರಾಜಮನೆತನಗಳು ಕರ್ನಾಟಕವನ್ನು ಆಳಿದವು. ಕದಂಬರಿಂದ ಹಿಡಿದು ಮೈಸೂರರಸರವರೆಗೆ ಸರಿಸುಮಾರು ಎರಡು ಸಾವಿರ ವರ್ಷಗಳ ಕಾಲ ಕರ್ನಾಟಕ ಪ್ರಕೃತಿ ಸೌಭಾಗ್ಯ, ಸಾಹಿತ್ಯ ಸಂಪತ್ತು, ತತ್ವಜ್ಞಾನ ವೈಭವ, ಲಲಿತಕಲಾ ಕ್ಷೇತ್ರಗಳಲ್ಲಿ ಮಿಗಿಲಾದ ಸೌಂದರ್ಯವನ್ನು ಸಾಧಿಸಿತು.

**ರಾಜರ ಆಳ್ವಿಕೆ :**

ಇಲ್ಲಿ ಆಳಿದ ರಾಜವಂಶಗಳ ಸಂಖ್ಯೆಯನ್ನು ಗಮನಿಸಿದಾಗ ಇತಿಹಾಸಕಾರರಿಗೆ ಎಲ್ಲಿಲ್ಲದ ಉತ್ಸಾಹವಾಗುತ್ತದೆ. ಮೌರ್ಯರನಂತರ ಸಾತವಾಹನರು, ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಯಾದವರು, ಹೊಯ್ಸಳರು, ವಿಜಯನಗರದ ಅರಸರು, ಹೈದರಾಲಿ ಹಾಗೂ ಟಿಪ್ಪುಸುಲ್ತಾನ ಮತ್ತು ಒಡೆಯರ ವಂಶದವರು ಈ ನಾಡಿನಲ್ಲಿ ತಮ್ಮ ಆಡಳಿತದ ಹೆಗ್ಗುರುತುಗಳನ್ನು ಬಿಟ್ಟು ಹೋಗಿದ್ದಾರೆ. ಕರ್ನಾಟಕದಲ್ಲಿ ಇಂದು 30 ಜಿಲ್ಲೆಗಳಿವೆ. 1956ರಲ್ಲಿ ಹಳೆಯ ಮೈಸೂರು ಸಂಸ್ಥಾನಕ್ಕೆ ಇತರ ಕನ್ನಡ ಭಾಷಾ ಪ್ರಾಂತ್ಯಗಳನ್ನು ಸೇರಿಸಲಾಯಿತು. ಅಷ್ಟರವರೆಗೆ ಕೊಡಗು ಒಬ್ಬ ದಿವಾನರ ಕೈಕೆಳಗೆ ಸ್ವತಂತ್ರ ರಾಜ್ಯವಾಗಿತ್ತು. ಮದ್ರಾಸು ಪ್ರಾಂತ್ಯದಿಂದ ದಕ್ಷಿಣ ಕನ್ನಡ, ಬಳ್ಳಾರಿ ಜಿಲ್ಲೆ ಹಾಗೂ ಕೊಳ್ಳೇಗಾಲ ತಾಲ್ಲೂಕನ್ನು; ಹೈದರಾಬಾದು ಪ್ರಾಂತ್ಯದಿಂದ ಬೀದರ್, ಗುಲ್ಬರ್ಗಾ ಹಾಗೂ ರಾಯಚೂರು ಜಿಲ್ಲೆಗಳನ್ನು, ಮುಂಬಯಿ ಪ್ರಾಂತ್ಯದಿಂದ ಬಿಜಾಪುರ, ಬೆಳಗಾವಿ, ಧಾರವಾಡ ಮತ್ತು ಕಾರವಾರಗಳನ್ನು ಮೈಸೂರಿಗೆ ಸೇರಿಸಲಾಯಿತು. 1973ರಲ್ಲಿ ಅಂದಿನ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರಿಡಲಾಯಿತು. ಪ್ರತಿಯೊಂದು ಪ್ರದೇಶಕ್ಕೂ ತನ್ನದೇ ಆದ ಚರಿತ್ರೆ ಇದೆ. 1336ರಿಂದ 1565ರವರೆಗೆ ವಿಜಯನಗರ ಸಾಮ್ರಾಜ್ಯವು ದಕ್ಷಿಣ ಭಾರತದಾದ್ಯಂತ ಹರಡಿಕೊಂಡಿತ್ತು. ಸಣ್ಣಪುಟ್ಟ ರಾಜರುಗಳೆಲ್ಲಾ ವಿಜಯನಗರ ಅರಸನ ಅಧೀನದಲ್ಲಿದ್ದರು. 1490ರಿಂದ 1686ರವರೆಗೆ ಬಿಜಾಪುರ ರಾಜ್ಯ (ಕರ್ನಾಟಕದ ಉತ್ತರ ಭಾಗ)ವು ಮಹಮ್ಮದೀಯರ ಅಧೀನದಲ್ಲಿತ್ತು. 1550 ರಿಂದ 1763ರವರೆಗೆ ಇಕ್ಕೇರಿ ಪ್ರಾಂತ್ಯ (ಪಶ್ಚಿಮ ಕರಾವಳಿಯ ಒಳನಾಡಿನ ಒಂದು ಭಾಗ) ವನ್ನು ಕೆಳದಿಯ ನಾಯಕರು ಆಳುತ್ತಿದ್ದರು. ಇವರಲ್ಲಿ ಬಿದನೂರಿನ ಶಿವಪ್ಪ ನಾಯಕನು ಸುಪ್ರಸಿದ್ಧ. 1399ರಿಂದ ಹಳೆಯ ಮೈಸೂರು ಸಂಸ್ಥಾನವನ್ನು ಒಡೆಯರ ವಂಶಸ್ತರು ಆಳಿದರು. ಹೈದರಾಲಿ, ಟಿಪ್ಪು ಸುಲ್ತಾನ ಮತ್ತು ಬ್ರಿಟಿಷರ ಕಾಲದಲ್ಲಿ ಮಾತ್ರ ಒಡೆಯರ ಆಳ್ವಿಕೆಗೆ ಧಕ್ಕೆ ಉಂಟಾಗಿತ್ತು. ಇಲ್ಲವೆಂದರೆ ಇವರದು ಸುದೀರ್ಘ ಕಾಲದ ಆಳ್ವಿಕೆ.

ಶಿಲಾಶಾಸನಗಳ ಸಂಖ್ಯೆಯನ್ನು ಗಮನಿಸಿದರೆ ಕರ್ನಾಟಕವು ಭಾರತದಲ್ಲೇ ಎರಡನೇ ಸ್ಥಾನವನ್ನು ಪಡೆಯುತ್ತದೆ. ಅಶೋಕನ ಕಾಲ (ಕ್ರಿ.ಪೂ.300) ದಿಂದ ಹಿಡಿದು ವಿಜಯನಗರ ಅರಸರ ಕಾಲದ ವೀರಗಲ್ಲುಗಳವರೆಗೆ ಶಿಲಾಶಾಸನಗಳು ಕರ್ನಾಟಕದಾದ್ಯಂತ ನೋಡ ಸಿಗುತ್ತವೆ. ಪುರಾತತ್ವ ಇಲಾಖೆ ಹಾಗೂ ವಸ್ತು ಸಂಗ್ರಹಾಲಯದ ಪ್ರಥಮ ನಿರ್ದೇಶಕರಾಗಿದ್ದ ಶ್ರೀಯುತ ಬಿ. ಲುವಿಸ್‌ರೈಸ್‌ರವರು ಅಂದಿನ ಮೈಸೂರು ರಾಜ್ಯ ಹಾಗೂ ಕೊಡಗು ನಾಡಿನ ಶಿಲಾಶಾಸನಗಳ ವಿವರಗಳನ್ನು 'ಎಪಿಗ್ರಾಫಿಯಾ ಕರ್ನಾಟಕ' ಎಂಬ ಹೆಸರಿನಿಂದ ಹನ್ನೆರಡು ಆವೃತ್ತಿಗಳಲ್ಲಿ ಪ್ರಕಟಿಸಿದ್ದಾರೆ. ಸೊರಬ ತಾಲೂಕಿನಲ್ಲೇ 600 ಶಿಲಾಶಾಸನಗಳು ಪತ್ತೆಯಾದವು. ಈ ಶಿಲಾಶಾಸನಗಳು ಕರ್ನಾಟಕದಲ್ಲಿ ಆಳಿದ ಚಂದ್ರಗುಪ್ತಮೌರ್ಯ, ಗಂಗ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ಮತ್ತು ಇನ್ನಿತರ ರಾಜವಂಶಗಳ ಬಗ್ಗೆ ತಿಳಿಸುತ್ತವೆ.

**ಧರ್ಮಗಳು :**

ಕರ್ನಾಟಕದಲ್ಲಿ ಅನೇಕ ಧರ್ಮಗಳಿವೆ. ಪ್ರತಿಯೊಂದು ಧರ್ಮವೂ ಈ ಪ್ರದೇಶದ ಸಂಸ್ಕೃತಿ ಹಾಗೂ ಪ್ರಗತಿಗೆ ತನ್ನದೇ ಆದ ವಿಶಿಷ್ಟವಾದ ಕೊಡುಗೆಯನ್ನು ನೀಡಿದೆ. ಇಲ್ಲಿ ಶೇ.86ರಷ್ಟು ಹಿಂದೂ ಧರ್ಮದವರಿದ್ದಾರೆ. ಇವರಲ್ಲಿ ಬೌದ್ಧರು, ಜೈನರು, ಸಿಖ್ಖರು ಸೇರಿಲ್ಲ. ಕೆಲವೊಮ್ಮೆ ಇವರನ್ನೆಲ್ಲಾ ಸೇರಿಸಿ ಸನಾತನ ಧರ್ಮ ಎಂದೂ ಕರೆಯಲಾಗುತ್ತಿದೆ. ಅಶೋಕನ ಕಾಲದಲ್ಲಿ ಬೌದ್ಧಧರ್ಮವು ಕರ್ನಾಟಕದಲ್ಲಿ ಸಾಕಷ್ಟು ಜನಪ್ರಿಯವಾಗಿತ್ತು. ಆತನು ಇಲ್ಲಿ ಈ ಧರ್ಮವನ್ನು ಪ್ರಸಾರಮಾಡಲು ಭಿಕ್ಷುಗಳನ್ನು ಕಳುಹಿಸಿದ್ದ. ಗುಲ್ಬರ್ಗಾ ಜಿಲ್ಲೆ, ಚಿತ್ತಾಪುರ ತಾಲ್ಲೂಕು, ಸನ್ನತಿಯಲ್ಲಿ ಬೌದ್ಧ ಧರ್ಮೀಯರ ವಸಾಹತುಗಳ ಅವಶೇಷಗಳು ಹಾಗೂ ನಾಲ್ಕು ಸ್ತೂಪಗಳು ಪತ್ತೆಯಾಗಿವೆ. ಇಲ್ಲಿ ದೊರೆತಿರುವ ನಾಣ್ಯಗಳ, ಮಣಿಗಳ ಹಾಗೂ ಉಂಗುರಗಳ ಪುರಾವೆಯನ್ನಾಧರಿಸಿ ಪುರಾತತ್ವ ತಜ್ಞರು ಈ ವಸಾಹತು ಸತ್ಯವಾಹನನ ಆಳ್ವಿಕೆಯ ಕಾಲದ್ದು (ಕ್ರಿ.ಪೂ.30) ಎಂದು ತೀರ್ಮಾನಿಸಿದ್ದಾರೆ. ಗುಲ್ಬರ್ಗಾದಲ್ಲಿ ಕ್ರಿ.ಶ.1ನೇ ಹಾಗೂ 2ನೇ ಶತಮಾನಕ್ಕೆ ಸಂಬಂಧಿಸಿದ ಬೌದ್ಧ ಧರ್ಮದ ಅವಶೇಷಗಳಿವೆ. ಇವುಗಳಿಂದ ಕರ್ನಾಟಕದಲ್ಲಿ ಬೌದ್ಧ ಧರ್ಮವು ಪ್ರಚಲಿತವಾಗಿತ್ತು ಎಂದು ನಾವು ತಿಳಿಯಬಹುದು. ಕ್ರಿ.ಶ.8 ಹಾಗೂ 9ನೇ ಶತಮಾನದ ರಾಷ್ಟ್ರಕೂಟ ವಂಶಕ್ಕೆ ಸೇರಿದ ದೇವಸ್ಥಾನಗಳನ್ನು ನಾವು ಕರ್ನಾಟಕದಲ್ಲಿ ಕಾಣಬಹುದು. ಕಲೆ ಹಾಗೂ ಶಿಲ್ಪಕ್ಕೆ ಬೌದ್ಧಧರ್ಮವು ಉತ್ತೇಜನ ನೀಡಿದೆ. ಆದರೆ ಈ ಧರ್ಮವು ಕರ್ನಾಟಕದಲ್ಲಿ ಪ್ರಧಾನ ಧರ್ಮವಾಗಿ ಬೆಳೆಯಲಿಲ್ಲ. ಮಹಾವೀರನ ಕಾಲದಲ್ಲೇ ಜೈನ ಧರ್ಮವು ಕರ್ನಾಟಕಕ್ಕೆ ಕಾಲಿಟ್ಟಿತು. ಕ್ರಿ.ಶ.982ರಲ್ಲಿ ಮಹಾ ವಿದ್ವಾಂಸನೂ, ಗಂಗಾ ಸಂಸ್ಥಾನದ ಸೇನಾಧಿಪತಿಯೂ ಆಗಿದ್ದ ಚಾವುಂಡರಾಯನು ಶ್ರವಣಗೊಳದಲ್ಲಿ ಗೊಮ್ಮಟ ವಿಗ್ರಹವನ್ನು ಸ್ಥಾಪಿಸಿದನು. ಶಿವಮೊಗ್ಗ ಜಿಲ್ಲೆ ಹುಂಚದಲ್ಲಿರುವ ಜೈನ ಬಸದಿಯು ಕ್ರಿ.ಶ.10–11ನೇ ಶತಮಾನದಲ್ಲಿ ನಿರ್ಮಾಣಗೊಂಡಿತು. ಈ ಬಸದಿಯ ಪಕ್ಕದಲ್ಲಿ 1300 ವರ್ಷಗಳ ಹಿಂದಿನ ಮುತ್ತಿನ ಕೆರೆ ಇದೆ. ಕರ್ನಾಟಕದ ಪುರಾತನ ಬರಹಗಾರರಲ್ಲಿ ಹಾಗೂ ಕವಿಗಳಲ್ಲಿ ಅನೇಕರು ಜೈನರು. ಕರ್ನಾಟಕದ ಸಾಹಿತ್ಯಕ್ಕೆ ಇವರ ಕೊಡುಗೆ ತುಂಬಾ ಅಮೂಲ್ಯವಾದದ್ದು. ಹಿಂದೆ ಒಂದು ಕಾಲದಲ್ಲಿ ಕರ್ನಾಟಕದಲ್ಲಿ ಜೈನರ ಸಂಖ್ಯೆ ಶೇ.30ರಷ್ಟಿದ್ದರೂ ಇಂದು ಜೈನರ ಸಂಖ್ಯೆ ಕರ್ನಾಟಕದಲ್ಲಿ ಶೇಕಡ ಒಂದಕ್ಕೆ ಇಳಿದಿದೆ.

ಶೈವ ಪಂಥವು ಕರ್ನಾಟಕದ ಪ್ರಧಾನ ಪಂಥಗಳಲ್ಲಿ ಒಂದಾಗಿದೆ. ಗೋಕರ್ಣವು ಪುರಾತನ ಕ್ಷೇತ್ರವಾಗಿದೆ. ತಾಳಗುಂದ ದೇವಸ್ಥಾನವು ಭಾರತದ ಅತೀ ಪ್ರಾಚೀನ ದೇವಸ್ಥಾನಗಳಲ್ಲಿ ಒಂದಾಗಿದೆ. ವೇದಾಂತದ ಮೂವರು ಆಚಾರ್ಯರುಗಳಾದ ಆದಿಶಂಕರ, ಮಧ್ವಾ ಹಾಗೂ ರಾಮಾನುಜರು ಉಪನಿಷತ್ತುಗಳ ಸತ್ಯಗಳನ್ನು ಇಡೀ ಮಾನವಕೋಟಿಗೆ ಉಪದೇಶ ಮಾಡಿದ್ದು ಈ ನಾಡಿನಿಂದಲೇ. ಶಂಕರಾಚಾರ್ಯರು (ಕ್ರಿ.ಶ.788–820) ಕರ್ನಾಟಕಕ್ಕೆ ಭೇಟಿಕೊಟ್ಟರು. ಅವರು ಸ್ಥಾಪಿಸಿದ ನಾಲ್ಕು ಮಠಗಳಲ್ಲಿ ಶೃಂಗೇರಿ ಮಠವು ಒಂದು ಎಂದು ಹೇಳಲಾಗಿದೆ. ಹಿಂದಿನ ಶೈವ ಪಂಥದ ಶಾಖೆಯಾದ ವೀರಶೈವ ಪಂಥವು ಬಸವಣ್ಣ (1131–1167) ಮತ್ತು ಆತನ ಅನುಯಾಯಿಗಳಿಂದ

ಪ್ರಸಾರವಾಯಿತು. ಈ ಪಂಥದ ಅನುಯಾಯಿಗಳನ್ನು ಲಿಂಗಾಯಿತರು ಎಂದು ಕರೆಯಲಾಗುತ್ತಿದೆ. ಇವರಲ್ಲಿ ಅಕ್ಕಮಹಾದೇವಿಯು ಶ್ರೇಷ್ಠ ಭಕ್ತೆ ಎಂದೆಣಿಸಿಕೊಂಡಿದ್ದಾಳೆ. ಶೈವ ಪಂಥದ ಇನ್ನೂ ಹಲವು ರೂಪಗಳು ಕರ್ನಾಟಕದಲ್ಲಿವೆ. ವೈಷ್ಣವ ಪಂಥವೂ ಕರ್ನಾಟಕದ ಪ್ರಾಚೀನ ಪಂಥಗಳಲ್ಲಿ ಒಂದಾಗಿದೆ. ರಾಮಾನುಜಾಚಾರ್ಯ ಹಾಗೂ ಮಧ್ವಾಚಾರ್ಯರಿಂದಾಗಿ ಈ ಪಂಥವು ಜನಪ್ರಿಯವಾಯಿತು. ರಾಮಾನುಜಾ ಚಾರ್ಯರು (1117–1137) ಕ್ರಿ.ಶ. 12ನೇ ಶತಮಾನದ ಆರಂಭದಲ್ಲಿ ಕರ್ನಾಟಕಕ್ಕೆ ಆಗಮಿಸಿ ಹೊಯ್ಸಳ ವಿಷ್ಣುವರ್ಧನರನ್ನು ವೈಷ್ಣವ ಪಂಥಕ್ಕೆ ಸೇರಿಸಿ, ಅನೇಕ ವರ್ಷಗಳ ಕಾಲ ಇಲ್ಲಿ ತಂಗಿದ್ದರು. ಮಧ್ವಾಚಾರ್ಯರು (1138–1317) ಉಡುಪಿಯ ಬೆಳ್ಳೆ ಎಂಬಲ್ಲಿ ಜನಿಸಿ ದ್ವೈತ ಸಿದ್ಧಾಂತವನ್ನು ಪ್ರಚುರ ಪಡಿಸಿದರು. ಪುರಂದರದಾಸರು ಮಾಧ್ವ ಪಂಥದ ಓರ್ವ ಹರಿದಾಸರಾಗಿದ್ದು ದಾಸಸಾಹಿತ್ಯದ ಶ್ರೇಷ್ಠ ಪ್ರವರ್ತಕರಾದರು; ಮಾತ್ರವಲ್ಲದೆ ಸಾವಿರಾರು ಕೀರ್ತನೆಗಳನ್ನು ರಚಿಸಿ ಕರ್ನಾಟಕ ಸಂಗೀತದ ಪಿತಾಮಹ ರೆಂದೆನಿಸಿಕೊಂಡಿದ್ದಾರೆ. ಮಂತ್ರಾಲಯದ ರಾಘವೇಂದ್ರ ಸ್ವಾಮಿಯವರು ಈ ಪಂಥದ ಪ್ರಖ್ಯಾತ ಬೋಧಕರಾಗಿರುತ್ತಾರೆ.

ಸಿಖ್ ಧರ್ಮವು ಕರ್ನಾಟಕದಲ್ಲಿ ಗುರುನಾನಕರು ಬೀದರಿಗೆ ಭೇಟಿ ಕೊಟ್ಟಾಗ ಕಾಲಿಟ್ಟಿತು ಎಂದು ಹೇಳಲಾಗಿದೆ. ಬೀದರಿನಲ್ಲಿ ಗುರುನಾನಕರ ಹೆಸರಿನಲ್ಲಿ ಗುರುನಾನಕ್ ಜಾಹಿರ್ ಸಾಹಿಬ್ ಇದೆ. ಗುರುಗೋವಿಂದರ ಆಪ್ತಶಿಷ್ಯರಲ್ಲಿ ಒಬ್ಬರಾದ ಸಾಹಿಬ್ ಸಿಂಗ್ ಎಂಬುವವರನ್ನು ಖಾಲ್ಸಾಕ್ಕೆ ಸೇರಿಸಲಾಯಿತು. ಅರೇಬಿಯಾದಲ್ಲಿ ಪ್ರಸಾರವಾದ ನಂತರ ಇಸ್ಲಾಂ ಧರ್ಮವು ಕರ್ನಾಟಕ್ಕೆ ಪ್ರವೇಶಿಸಿತು ಎನ್ನಬಹುದು. ಕರ್ನಾಟಕದ ಪ್ರಮುಖ ವಾಣಿಜ್ಯ ಕೇಂದ್ರಗಳಲ್ಲಿ ಮುಸ್ಲಿಮರು ತಂಗಲಾರಂಭಿಸಿದರು. ಹೊನ್ನಾವರದಲ್ಲಿ ಒಬ್ಬ ಮುಸ್ಲಿಂ ಅರಸನು ಆಳುತ್ತಿದ್ದ (1342). ಮುಸ್ಲಿಂ ಅರಸರು ಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ವನ್ನು ಕೊಟ್ಟರು. ಇಂಡೋ–ಸಾರ್ಸೆನಿಕ್ ಕಲೆಯ ಸ್ಮಾರಕಗಳನ್ನು ನಾವು ಗುಲ್ಬರ್ಗಾ, ಬೀದರ್, ಬಿಜಾಪುರ, ಸಿರಾ ಹಾಗೂ ಶ್ರೀರಂಗಪಟ್ಟಣಗಳಲ್ಲಿ ಕಾಣಬಹುದು. ಮುಸ್ಲಿಮರು ಕರ್ನಾಟಕ ಜನಸಂಖ್ಯೆಯಲ್ಲಿ ಶೇ.11ರಷ್ಟಿದ್ದಾರೆ. ಬ್ರಹ್ಮ ಸಮಾಜದಂತಹ ಅನೇಕ ಆಧುನಿಕ ಧಾರ್ಮಿಕ ಸಂಘಟನೆಗಳು ಕ್ರೈಸ್ತ ಮೌಲ್ಯಗಳನ್ನು ತಮ್ಮಲ್ಲಿ ಅಳವಡಿಸಿಕೊಂಡು ಸಮಾಜ ಸುಧಾರಣ ಕಾರ್ಯಗಳಲ್ಲಿ ತೊಡಗಿ ಸಮಾಜದ ಏಳಿಗೆಗೆ ಕಾರಣವಾಗಿವೆ. ಸಾಮಾನ್ಯ ವಾಗಿ ಕರ್ನಾಟಕವನ್ನು ಆಳಿದ ಎಲ್ಲಾ ಅರಸರು ಧಾರ್ಮಿಕ ಮುಖಂಡರನ್ನು ಗೌರವಿಸಿ, ಧಾರ್ಮಿಕ ಕ್ಷೇತ್ರಗಳನ್ನು ಪ್ರೋತ್ಸಾಹಿಸಿ, ಅವರವರ ನಂಬಿಕೆಗಳನ್ನು ಪ್ರಸಾರಮಾಡಲು ಸ್ವಾತಂತ್ರ್ಯವನ್ನು ಕೊಡುತ್ತಿದ್ದರು. ದೇವಸ್ಥಾನಗಳು ಆಧ್ಯಾತ್ಮಿಕ ಹಾಗೂ ನೈತಿಕ ಕೇಂದ್ರಗಳಾಗಿದ್ದವು ಮಾತ್ರವಲ್ಲದೆ ಜ್ಞಾನ ಹಾಗೂ ಕಲೆಯ ಬೀಡುಗಳೂ ಆಗಿದ್ದರು.

**ಸಾಹಿತ್ಯ :**

ಮಹಾಭಾರತದ ಕಾಲದಲ್ಲಿಯೇ ಕರ್ನಾಟಕ ವಿಶೇಷವಾದ ಸಾಂಸ್ಕೃತಿಕ ವರ್ಚಸ್ಸಿನಿಂದ ವೈಭವೋಪೇತವಾಗಿ ಪ್ರಖ್ಯಾತಿಯನ್ನು ಪಡೆದಿತ್ತು. 'ಕನ್ನಡ ಸಂಸ್ಕೃತಿ'

ಎಂಬ ವಿಶಿಷ್ಟವಾದ ಸಾಂಸ್ಕೃತಿಕ ಜಗತ್ತನ್ನು ನಿರ್ಮಿಸಿತ್ತು. ಕನ್ನಡ ಸಂಸ್ಕೃತಿಯ ಉದಯ ಕ್ಷಾತ್ರದಿಂದಾದದ್ದು, ಸ್ವಾಭಿಮಾನದಿಂದಾದದ್ದು.

ಈ ಕ್ಷಾತ್ರ ಪರಂಪರೆಗೆ ನಮ್ಮ ಕವಿಗಳನೇಕರು ಸೇರಿದ್ದಾರೆ. ಹತ್ತನೆಯ ಶತಮಾನದ ಪಂಪ ಲೆಕ್ಕಣಿಕೆ ಹಿಡಿದರೆ ಕವಿ, ಕತ್ತಿ ಹಿಡಿದರೆ ಕಲಿ. ಚದುರಂಗ ಬಲವನ್ನು ಭಯಗೊಳಿಸುವ ಶಕ್ತ ಪರಾಕ್ರಮಿ –

*ಪಂಪಂ ಧಾತ್ರೀವಳಯ ನಿ*
*ಳಿಂಪಂ ಚತುರಂಗ ಬಳ ಭಯಂಕರಣಂ ನಿ ।*
*ಷ್ಕಂಪಂ ಲಲಿತಾಲಂಕರ*
*ಣಂ ಪಂಚಶರೈಕ ರೂಪನಪಗತಪಾಪಂ ॥*

*(ವಿ.ವಿಜಯಂ 14-49)*

(ಪಂಪ ಭೂಮಿಯ ದೇವತೆ; ಚದುರಂಗ ಬಲದ ಪಾಲಿಗೆ ಭಯಂಕರನಾದವನು; ಅಂಜಿಕೆ ಇಲ್ಲದವನು; ಒಪ್ಪುವ ವೇಷಭೂಷಣಗಳಿಂದ ಅಲಂಕಾರವುಳ್ಳವನು; ಪಂಚಬಾಣಗಳನ್ನು ಹಿಡಿದ ಮನ್ಮಥಸ್ವರೂಪಿ ಹಾಗೂ ಪಾಪರಹಿತನಾದವನು)

ಅಭಿಮಾನಧನವಾದ ಪಂಪ ಕೈಯೊಡ್ಡಿ ಬೇಡಿಕೊಳ್ಳುವ ಪ್ರವೃತ್ತಿಯವನಲ್ಲ. ಪೂಜೆ, ಕೀರ್ತಿ, ಲಾಭ ಈ ಮೂರೂ ಜಿನೇಂದ್ರನ ಪೂಜೆಯಿಂದಲೇ ದೊರೆಯುವಂಥದು. ಮನುಷ್ಯರೇನು ಕೊಟ್ಟಾರು. "ಪೆಱರೀವುದೇಂ ಪೆಱರು ಮಾಡುವುದೇಂ ಪೆಱರಿಂದ ಮಪ್ಪುದೇಂ" ಎಂದು ಕೇಳುತ್ತಾನೆ.

ಪಂಪನ ಸ್ವಾಭಿಮಾನವನ್ನು ಉಳಿಸಿಕೊಂಡು ಬಂದವರು ವಚನಕಾರರು, ಹನ್ನೆರಡನೆಯ ಶತಮಾನದಲ್ಲಿ ಒಂದು ಸಾಮಾಜಿಕ ಚಳುವಳಿಯೇ ವಚನಕಾರರಿಂದ ನಡೆಯಿತು. ಸಾಮಾಜಿಕ, ಧಾರ್ಮಿಕ, ಆರ್ಥಿಕ ಅಸಮಾನತೆಗಳ ವಿರುದ್ಧ ಬಂಡಾಯವೆದ್ದ ಇವರು, ರಾಜತ್ವವನ್ನೇ ಧಿಕ್ಕರಿಸಿ ವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿದರು. ಜಾತಿಪದ್ಧತಿಯನ್ನು ಬುಡಸಹಿತ ಕೀಳುವ ಪ್ರಯತ್ನದಲ್ಲಿ ವಚನ ಸಾಹಿತ್ಯ ಹೊಕ್ಕರೂ ಕ್ರಮೇಣ ಸಮಾಜದ ಸಮಸ್ಯೆಗಳು ಗೌಣವಾಗಿ ಅಲೌಕಿಕಕ್ಕೆ ನೇತುಕೊಂಡು 'ಅನುಭಾವಕ್ಕೆ' ಒತ್ತು ಕೊಡುತ್ತದೆ. ಅಭಿಮಾನಿ ವಚನಕಾರರು ಭಕ್ತಿಯೆಂಬ ದೀಪದ ಸುತ್ತ ತಿರುಗುತ್ತ ಸ್ವಾಭಿಮಾನದ ರೆಕ್ಕೆಗಳನ್ನು ಸೀದುಕೊಂಡರೂ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳುವಲ್ಲಿ ಹಿಂದಾಗಲಿಲ್ಲ, ಸಂಸ್ಕೃತಿಯ ಸಮನ್ವಯವನ್ನು ಸಾಧಿಸಿದರು. ಮುಂದೆ ಹರಿಹರ ಮತ್ತು ರಾಘವಾಂಕರು ಭಕ್ತಿ ಸಾಹಿತ್ಯದ ತೇರನೆಳೆದರು.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಿಂದ ವೈದಿಕ ಧರ್ಮಕ್ಕೆ ಪುನರ್ ಚೇತನ ಸಿಕ್ಕುತ್ತದೆ. ಕುಮಾರವ್ಯಾಸ, ಚಾಮರಸ ಮತ್ತು ರತ್ನಾಕರವರ್ಣಿ ಕನ್ನಡ ಸಾಹಿತ್ಯಕ್ಕೆ ಅಪರೂಪದ ಕೃತಿಗಳನ್ನೊದಗಿಸುತ್ತಾರೆ. ಇದೇ ಸಂದರ್ಭದಲ್ಲಿ ಮಧ್ವಾಚಾರ್ಯರ ಆಶ್ರಯದಿಂದ ಭಕ್ತಿಪಂಥದ ಮುಂದುವರಿಕೆಯಾಗಿ ಹರಿದಾಸರು ಕಾಣಿಸಿಕೊಳ್ಳುತ್ತಾರೆ.

ಪುರಂದರದಾಸ, ಕನಕದಾಸ, ವಿಜಯದಾಸರು ಕರ್ನಾಟಕ ಸಂಸ್ಕೃತಿಯ ಮುಂದುವರಿಕೆಗೆ ಕಾರಣರಾಗುತ್ತಾರೆ. ಹರಿಭಕ್ತಿಯ ಮುಂದುವರಿಕೆ ಆಮೇಲೆ ಲಕ್ಷ್ಮೀಶನಿಂದ ಸಾಗುತ್ತದೆ. ಹೀಗೆಯೇ ಮುಂದುವರಿದು ಸರ್ವಜ್ಞನ ಪ್ರವೇಶವಾಗುತ್ತದೆ. ಅವಧೂತನಂತೆ ಅಲೆಮಾರಿಯಾಗಿದ್ದ ಈತ ಜನಜೀವನದ ನಾಡಿಮಿಡಿತವನ್ನು ಅರಿತಿದ್ದ. ಕನ್ನಡನಾಡಿನ ಸಾಮಾಜಿಕ ಬದುಕನ್ನು ಆಳವಾಗಿ ಅರಿತ ಕವಿಗಳಲ್ಲಿ ಸರ್ವಜ್ಞನನ್ನು ಬಿಟ್ಟರೆ ನಯಸೇನ ಪ್ರಮುಖನು. ರೂಪಕಗಳ ಸರಮಾಲೆಯಲ್ಲಿ ನಯಸೇನನ ಅನುಭವ ಶಕ್ತಿ ವ್ಯಯವಾಗಿ ಹೋಗಿದೆ ಎಂದು ಮೇಲ್ನೋಟಕ್ಕೆ ಕಂಡರೂ ಆತನ ಜೀವಂತ ಬದುಕಿನ ಅರ್ಥ ಎದ್ದು ಕಾಣುತ್ತದೆ. ಸರ್ವಜ್ಞ ಜನಪದರ ತ್ರಿಪದಿಗಳಲ್ಲಿಯೇ ಲೋಕದ ವೈರುಧ್ಯಗಳನ್ನು ತೋರಿಸಿಕೊಟ್ಟು ಸರ್ವಜ್ಞನಾಗಿದ್ದಾನೆ.

ಕನ್ನಡ ನವೋದಯ ಕಾವ್ಯ ಬ್ರಿಟಿಷರ ಆಳ್ವಿಕೆಯ ಪ್ರಭಾವದಿಂದ ಪ್ರತಿಬಿಂಬಿಸಿತು. 'ಶ್ರೀ'ಯವರಿಂದ ಪ್ರಾರಂಭವಾಗಿ ಕೊಳುಕೊಡುಗೆಯ ಮೂಲಕ ಈ ಪರಂಪರೆ ಮುಂದುವರಿಯಿತು. ರಮ್ಯಕವಿಗಳ ಆಲೋಚನೆಗಳು ಕನ್ನಡ ಕವಿಗಳ ದಾರಿದೀಪವಾಯಿತು. ನಮ್ಮ ನಾಡಿನಲ್ಲಿ ಅದುವರೆಗೆ ಅನುಭವಿಸಿದ್ದ ಸಮೂಹ ಸಂಬಂಧದಿಂದ ಭಿನ್ನವಾದ, ವ್ಯಕ್ತಿ ಪ್ರಜ್ಞೆಯ ದೃಷ್ಟಾರನ ಸ್ಥಾನವನ್ನು ಕವಿ ಪಡೆದುಕೊಂಡ. ಕುವೆಂಪು, ಬೇಂದ್ರೆ, ಪುತಿನ, ಮಾಸ್ತಿ, ಗೋಕಾಕ್, ಪಂಜೆ, ಗೋವಿಂದ ಪೈ ಮುಂತಾದವರು ಈ ಯುಗದ ಧನಿಗಳಾದರು. ಕ್ರಮೇಣ ಸಾಹಿತ್ಯ ಕವಲೊಡೆದು ನವೋದಯ, ನವ್ಯ, ನವ್ಯೋತ್ತರ, ಬಂಡಾಯ, ದಲಿತ ಸಾಹಿತ್ಯವಾಗಿ ಸಮಾಜದ ದೀನದಲಿತರ ಬದುಕನ್ನೂ ತನ್ನ ಕಕ್ಷೆಗೆ ತಂದುಕೊಂಡಿತು.

**ಸಂಗೀತ :**

ತನ್ನದೇ ಆದ ಕರ್ನಾಟಕದ ಸಂಗೀತ ಶೈಲಿಯನ್ನು ರೂಪಿಸಿದ ಕೀರ್ತಿ ಕರ್ನಾಟಕದ್ದು. ಆದ್ದರಿಂದ ನಾನ್ಯದೇವ, ಸೋಮೇಶ್ವರ ಚಕ್ರವರ್ತಿ, ಕಲ್ಲಿನಾಥ, ಪುಂಡರೀಕ ವಿಠ್ಠಲ, ಶಾರ್ಙ್ಗದೇವ ಇವರು ಕರ್ನಾಟಕ ಸಂಗೀತ ಚರಿತ್ರೆಯ ಆದ್ಯರು. ನಿಜಗುಣ ಶಿವಯೋಗಿಗಳು ಸಂಗೀತ ಶಾಸ್ತ್ರಕಾರರೂ ಹೌದು, ಉನ್ನತ ಮಟ್ಟದ ವಾಗ್ಗೇಯಕಾರರೂ ಹೌದು. ಪುರಂದರದಾಸರಂತೂ ಕರ್ನಾಟಕ ಸಂಗೀತ ಚರಿತ್ರೆಯ ಅಗ್ರಮಾನ್ಯರು. ದಕ್ಷಿಣ ಭಾರತದ ದಕ್ಷಿಣಾದಿ ಸಂಗೀತ ಪರಂಪರೆ "ಕರ್ನಾಟಕ ಸಂಗೀತ"ವೆಂದೇ ಹೆಸರಾಗಿರುವುದು ಗಮನಾರ್ಹ ವಿಚಾರ, "ಭಾರತದ ಎಲ್ಲ ಕಡೆಯ ಸಂಗೀತ ಪರಂಪರೆಗಳ ಸಾರವನ್ನು ತೆಗೆದುಕೊಂಡು ಕರ್ನಾಟಕವನ್ನು ಭಾರತೀಯ ಸಂಗೀತದ ತವರೂರು ಎಂದು ಹೇಳಿದರೆ ತಪ್ಪಾಗಲಾರದು. ಇಲ್ಲಿ ಕರ್ನಾಟಕ ಹಾಗೂ ಹಿಂದೂಸ್ಥಾನಿ ಸಂಗೀತ ಪ್ರಭೇದಗಳೆರಡೂ ಒಟ್ಟೊಟ್ಟಿಗೆ ನೆಲೆಸಿವೆ. ಹಿಂದೂಸ್ಥಾನಿ ಸಂಗೀತದ ಸುಪ್ರಸಿದ್ಧ ಪೋಷಕರಾಗಿರುವ ಮನ್ಸೂರ್, ಭೀಮಸೇನ್, ರಾಜಗುರು, ಹಾನಗಲ್ ಇವರು ಉತ್ತರ ಕರ್ನಾಟಕದವರು. ಕರ್ನಾಟಕ ಸಂಗೀತದಲ್ಲಿ ನೂರಾರು ಕೀರ್ತನೆಗಳನ್ನು ಸಾದರಪಡಿಸಿರುವ ತ್ಯಾಗರಾಜ್, ಸದಾಶಿವರಾವ್, ಮುತ್ತಯ್ಯ

ಭಾಗವತರ್, ವಾಸುದೇವಾಚಾರ್ಯ ಇವರೆಲ್ಲ ಒಡೆಯರ್‌ರವರ ಆಳ್ವಿಕೆಯಲ್ಲಿ ಮೈಸೂರು ರಾಜ್ಯದಲ್ಲಿ ಪ್ರಖ್ಯಾತರಾಗಿದ್ದವರು. ವೀಣೆಶೇಷಣ್ಣರೆಂದೇ ಪ್ರಸಿದ್ಧರಾಗಿರುವ ಶೇಷಣ್ಣನವರು ಐವತ್ತಕ್ಕಿಂತಲೂ ಹೆಚ್ಚು ಶ್ರೇಷ್ಠ ಕೀರ್ತನೆಗಳನ್ನು ರಚಿಸಿದ್ದಾರೆ. ಬಿಡಾರಮ್ ಕೃಷ್ಣಪ್ಪನವರು ಸುಪ್ರಸಿದ್ಧ ಸಂಗೀತ ತಜ್ಞರಾಗಿದ್ದರು. ಅವರ ಶಿಷ್ಯರಾಗಿದ್ದ ಪಿಟೀಲು ಟಿ.ಚೌಡಯ್ಯನವರು ಏಳು ತಂತಿಗಳ ಪಿಟೀಲು ವಾದಕರಾಗಿದ್ದು, ಸಂಗೀತ ಲೋಕದಲ್ಲಿ ಅದ್ವಿತೀಯ ಎಂಬ ಬಿರುದನ್ನು ಪಡೆದವರು. ಸಂಗೀತದಲ್ಲಿ ಅತೀ ಹೆಚ್ಚಿನ ರಚನೆಗಳನ್ನು ಮಾಡಿ, ಅಕ್ಬರನ ದರಬಾರಿನಲ್ಲೂ ಮಿಂಚಿ, ವಿಶ್ವವಿಖ್ಯಾತರಾಗಿರುವ ಭಾರತದ ಸಂಗೀತಗಾರರಲ್ಲಿ ಬಹುಮಂದಿ ಕರ್ನಾಟಕದವರೆಂದರೆ ಅತಿಶಯೋಕ್ತಿಯಾಗಲಾರದು.

ನೃತ್ಯ ಮತ್ತು ಚಿತ್ರಕಲೆಗಳಲ್ಲೂ ಕರ್ನಾಟಕ ಬೇರೆ ರಾಜ್ಯಗಳಿಗಿಂತ ಮುಂದಿದೆ. ಕರ್ನಾಟಕಕ್ಕೆ ತನ್ನದೇ ಆದ ವಿಶಿಷ್ಟ ನೃತ್ಯ ಪರಂಪರೆ ಇರುವುದಾಗಿ ತಿಳಿದು ಬರುತ್ತದೆ. ಐಹೊಳೆ, ಬಾದಾಮಿ, ಪಟ್ಟದಕಲ್ಲು, ಬೇಲೂರು, ಹಳೇಬೀಡು, ಸೋಮನಾಥಪುರಗಳ ದೇವಾಲಯಗಳು ಸ್ವತಃ ಶಿಲ್ಪಕಲೆಯನ್ನು ಪ್ರತಿನಿಧಿಸುವುದಲ್ಲದೆ ನರ್ತನಗಳ ಭಂಗಿಯನ್ನೂ ಹೇಳಿ ನೃತ್ಯದ ಪ್ರಾಚೀನತೆಯನ್ನು ವ್ಯಕ್ತಪಡಿಸುತ್ತವೆ. ರತ್ನಾಕರವರ್ಣಿ ತನ್ನ 'ಭರತೇಶ ವೈಭವ' ಕಾವ್ಯದಲ್ಲಿ ನರ್ತನಶಾಲೆಯ ವರ್ಣನೆ ಮಾಡಿದ್ದಾನೆ. ಅಲ್ಲದೆ ದಿಕ್ಕನ್ನಿಕಾ ನಾಟ್ಯ, ಜಲಕನ್ನಿಕಾ ನಾಟ್ಯಗಳಂಥ ಬ್ಯಾಲೆಗಳನ್ನು ವರ್ಣಿಸಿದ್ದಾನೆ. ಸ್ವತಃ ಶಾಂತಲೆ ಅತ್ಯದ್ಭುತ ನರ್ತಕಿಯಾಗಿದ್ದಳು. ಶಿಲ್ಪ-ವಾಸ್ತುಶಿಲ್ಪಗಳಲ್ಲೂ ಕೂಡ ಕರ್ನಾಟಕ ಹಿಂದೆ ಬಿದ್ದಿಲ್ಲ. ಉತ್ತರದ ನಾಗರ, ದಕ್ಷಿಣದ ದ್ರಾವಿಡ ಎಂಬ ಎರಡು ವಾಸ್ತು ಶಿಲ್ಪಕಲೆಗಳ ಸಂಗಮವಾಗಿತ್ತು ಕರ್ನಾಟಕ. ಐಹೊಳೆ ಪಟ್ಟದಕಲ್ಲುಗಳಲ್ಲಿ ಈ ಎರಡೂ ಶೈಲಿಗಳ ಸಂಗಮ ನೋಟವಿದೆ. ಗೊಮ್ಮಟ ವಿಗ್ರಹ ವಾಸ್ತವವಾಗಿ ಕರ್ನಾಟಕದ ಶಿಲ್ಪಕಲೆಯ ಮುಕುಟಮಣಿ.

ಕರ್ನಾಟಕ ಸೌಂದರ್ಯೋಪಾಸಕರ ತವರು. ಪಶ್ಚಿಮ ಘಟ್ಟ ಪ್ರದೇಶಗಳು, ಕಾರವಾರ, ಕುಮಟ, ಬಟ್ಕಲ್, ಮಲ್ಪೆ, ಹೊನ್ನಾವರ, ಉಡುಪಿ, ಮಂಗಳೂರು ಮೊದಲಾದ ಸಮುದ್ರ ತೀರ ಪ್ರದೇಶಗಳು; ಆಗುಂಬೆ, ಮಡಿಕೇರಿ, ಬಾಬಾಬುಡನ್‌ಗಿರಿ, ಮುಳ್ಳಯ್ಯನಗಿರಿ, ಭುವನಗಿರಿದುರ್ಗ, ಬಿಳಿಗಿರಿರಂಗನ ಬೆಟ್ಟ, ಮಾದೇಶ್ವರನ ಬೆಟ್ಟ, ಚಾಮುಂಡೇಶ್ವರಿಬೆಟ್ಟ, ನಂದಿಬೆಟ್ಟ ಮುಂತಾದ ಬೆಟ್ಟಪ್ರದೇಶಗಳು; ಶೃಂಗೇರಿ, ಪಂಪಾಕ್ಷೇತ್ರ, ಧರ್ಮಸ್ಥಳ, ಮಂತ್ರಾಲಯ ಮುಂತಾದ ಕ್ಷೇತ್ರಗಳು ಇವೆ. ಕೃಷ್ಣರಾಜಸಾಗರ, ತುಂಗಭದ್ರಾ, ಶರಾವತಿ, ಹೇಮಾವತಿ ಮುಂತಾದ ಜಲಾಶಯಗಳು; ಶಿವನಸಮುದ್ರ, ಗೇರುಸೊಪ್ಪೆ ಮುಂತಾದ ಜಲಪಾತಗಳು, ಕೊಡಗಿನ ತಲಕಾವೇರಿಯ ಸುಂದರತಾಣ, ಬೇಲೂರು, ಹಳೇಬೀಡು, ಸೋಮನಾಥಪುರಗಳ ಶಿಲ್ಪ ಸೌಂದರ್ಯ; ಬನ್ನೇರುಘಟ್ಟ, ನಾಗರಹೊಳೆ, ಬಂಡಿಪುರ, ಅರಣ್ಯಧಾಮಗಳು ಕಣ್ಮನ ಸೆಳೆಯುತ್ತವೆ. ರಂಗನತಿಟ್ಟಿನ ಪಕ್ಷಿಧಾಮ, ಐಹೊಳೆ, ಬಾದಾಮಿ, ಪಟ್ಟದಕಲ್ಲಿನ ಕಲೆಗಳು, ವಿಜಯನಗರ ಸೌಂದರ್ಯದ ಅವನತಿಯ ಹಾಳುಹಂಪೆ ಪ್ರದೇಶ-ಎಲ್ಲವೂ ಕರ್ನಾಟಕದ ಸೌಂದರ್ಯವನ್ನು ಪ್ರತಿಬಿಂಬಿಸುವುದಲ್ಲದೆ ಕನ್ನಡಿಗರ ಹಿರಿಮೆ-ಗರಿಮೆಯನ್ನೂ ಎತ್ತಿ ತೋರುತ್ತವೆ.

ಶ್ರೀಗಂಧದ ಸುವಾಸನೆ, ಬಿಳಿಮಲ್ಲಿಗೆ ಹಾಗೂ ಹಳದಿ ಸಂಪಿಗೆಯ ಕಂಪು, ಏಲಕ್ಕಿ ಹಾಗೂ ಕರಿಮೆಣಸು, ಕೋಲಾರದ ಚಿನ್ನದ ಗಣಿಗಳು ಹಾಗೂ ರೇಷ್ಮೆ ಕೈಗಾರಿಕೆ, ಕೊಡಗು ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ಕಾಫಿ ತೋಟಗಳು, ಶಿವಮೊಗ್ಗ ಜಿಲ್ಲೆಯ ಅಡಿಕೆ, ಸೊರಬ, ಸಾಗರ ಹಾಗೂ ಕುಮಟಾದ ಗುಡಿಕಾರರು, ಪಶ್ಚಿಮ ಘಟ್ಟಗಳ ಆನೆಗಳು ಇತ್ಯಾದಿಗಳೆಲ್ಲಾ ಈ ನಾಡಿನ ಹೆಸರು ಮತ್ತು ಕೀರ್ತಿಯನ್ನು ಎಲ್ಲೆಡೆ ಹರಡಿವೆ.

ಕರ್ನಾಟಕದ ಶೇ.65ರಷ್ಟು ಜನರ ಮುಖ್ಯ ಕಸುಬು ವ್ಯವಸಾಯ. ಈ ಪ್ರದೇಶದಲ್ಲಿ ಬಡತನದ ರೇಖೆಗಿಂತ ಕೆಳಗಿರುವವರು ಹೆಚ್ಚಿನವರು ಕೃಷಿಕಾರ್ಮಿಕರು. 1980ರ ನಂತರ ಕೈಗಾರಿಕಾ ಉತ್ಪಾದನೆಯು ಏರುತ್ತಾ ಬಂದಿದೆ. 7ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕೈಗಾರಿಕಾ ಉತ್ಪಾದನೆಯು ಶೇ.6.6ರಷ್ಟು ಬೆಳವಣಿಗೆಯನ್ನು ಕಂಡಿದೆ. ಜಲವಿದ್ಯುತ್ ಕ್ಷೇತ್ರದಲ್ಲಿ ಕರ್ನಾಟಕವು ತುಂಬಾ ಮುನ್ನಡೆಯನ್ನು ಸಾಧಿಸಿದೆ. ಏಷ್ಯಾದಲ್ಲೇ ಪ್ರಥಮವಾಗಿರುವ ಜಲವಿದ್ಯುತ್ ಯೋಜನೆಯು ಶಿವನಸಮುದ್ರದಲ್ಲಿದೆ. ಈಗಿರುವ ಎಲ್ಲಾ ಯೋಜನೆಗಳು ಯಶಸ್ವಿಯಾದರೆ ಕರ್ನಾಟಕವು ರಾಷ್ಟ್ರದಲ್ಲೇ ಹೆಚ್ಚು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ರಾಜ್ಯವಾಗಲಿದೆ ಹಾಗೂ ಈ ಕಾರಣದಿಂದ ಕೈಗಾರಿಕೆಗಳಲ್ಲಿ ಮುನ್ನಡೆಯನ್ನು ಸಾಧಿಸಲಿದೆ. ಬಟ್ಟೆಬರೆಗಳು, ಚಿನ್ನ, ಉಕ್ಕು, ಕಾಗದ ಇತ್ಯಾದಿಗಳ ಉತ್ಪಾದನೆಗಾಗಿ ಹಲವಾರು ಯೋಜನೆಗಳು ಜಾರಿಯಲ್ಲಿದ್ದು, ಸಾವಿರಾರು ಮಂದಿ ಕಾರ್ಮಿಕರಿಗೆ ಜೀವನೋಪಾಯವನ್ನು ಒದಗಿಸಿವೆ.

ಎಲ್ಲೆಡೆಯಂತೆ ಇಲ್ಲಿಯೂ ಕ್ರಮಬದ್ಧ ಶಿಕ್ಷಣ 19ನೇ ಶತಮಾನದ ಮಧ್ಯ ಭಾಗದಿಂದ ಆರಂಭಗೊಂಡವು. ಹಲವಾರು ಪ್ರಮುಖ ಕೇಂದ್ರಗಳಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿದ ಕೀರ್ತಿಯು ಕ್ರೈಸ್ತ ಮಿಷನರಿಗಳಿಗೆ ಸಲ್ಲಬೇಕು. ಇಂದು ಶೈಕ್ಷಣಿಕ ಸೌಲಭ್ಯಗಳ ಅಸಮತೋಲನವು ಎದ್ದು ಕಾಣುತ್ತಿದೆ. 1956ರಿಂದ ಪ್ರಾಥಮಿಕ ಶಿಕ್ಷಣವು ರಾಜ್ಯದಾದ್ಯಂತ ಕಡ್ಡಾಯವಾಯಿತು. ಇಂದು 50,000ಕ್ಕೂ ಮೀರಿ ಪ್ರಾಥಮಿಕ ಶಾಲೆಗಳೂ, 5,500 ಕ್ಕೂ ಮೀರಿ ಪ್ರೌಢಶಾಲೆಗಳೂ, 800ಕ್ಕೂ ಮೀರಿ ಕಾಲೇಜು ಗಳೂ ಇವೆ. 2008ರ ಜನಗಣತಿಯಂತೆ ಶೇ.66 ಮಂದಿ ಅಕ್ಷರಸ್ಥರಾಗಿದ್ದಾರೆ. 21 ವಿಶ್ವವಿದ್ಯಾಲಯಗಳಿವೆ. ಇವುಗಳ ಅಧೀನದಲ್ಲಿ 200ಕ್ಕೂ ಹೆಚ್ಚು ತಾಂತ್ರಿಕ ಕಾಲೇಜು ಗಳಿವೆ. ವಯಸ್ಕರ, ಅನೌಪಚಾರಿಕ ಹಾಗೂ ಮಹಿಳೆಯರ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಜನರ ಆರೋಗ್ಯವನ್ನು ಕಾಪಾಡಲು 4,500 ಕ್ಕೂ ಹೆಚ್ಚು ಆರೋಗ್ಯ ಕೇಂದ್ರಗಳಿವೆ.

ಒಟ್ಟಿನಲ್ಲಿ ಕರ್ನಾಟಕ ತನ್ನ ಐತಿಹಾಸಿಕ ಮಹತ್ವವನ್ನು ಉಳಿಸಿಕೊಂಡು ಸಾಮಾಜಿಕ, ರಾಜಕೀಯ, ಆರ್ಥಿಕ, ಚಾರಿತ್ರಿಕ, ಭೌಗೋಳಿಕ, ಪ್ರಾಕೃತಿಕವಾಗಿ ಭಾರತ ದೇಶವನ್ನು ಪ್ರತಿನಿಧಿಸುತ್ತದೆ. ಸುಮಾರು 191,791 ಚದರ ಕಿ.ಮೀ. ವಿಸ್ತೀರ್ಣವಿದೆ. ಒಟ್ಟು ಮೂವತ್ತು ಜಿಲ್ಲೆಗಳಿದ್ದು, 218 ತಾಲೂಕುಗಳಿವೆ. ಜಿಲ್ಲೆಗಳು ಕ್ರಮವಾಗಿ ಹೀಗಿವೆ: ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಬೆಳಗಾಂವ್, ಬಳ್ಳಾರಿ, ಬೀದರ್,




ಬಿಜಾಪುರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ, ದಾವಣಗೆರೆ, ಧಾರವಾಡ, ಗದಗ, ಗುಲ್ಬರ್ಗ, ಹಾಸನ, ಹಾವೇರಿ, ಕೊಡಗು, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ರಾಮನಗರ, ಶಿವಮೊಗ್ಗ, ತುಮಕೂರು, ಉಡುಪಿ, ಉತ್ತರ ಕನ್ನಡ ಮತ್ತು ಯಾದಗಿರಿ. 2011ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ಪುರುಷರು 3,10,57,742 ಮತ್ತು 3,00,72,962 ಮಹಿಳೆಯರೂ ಇದ್ದಾರೆ. ಪ್ರತಿ 1000 ಪುರುಷರಿಗೆ 968 ಮಹಿಳೆಯರಿದ್ದಾರೆ. ಹಿಂದುಗಳು ಅಧಿಕ ಸಂಖ್ಯೆಯಲ್ಲಿದ್ದಾರೆ (83%), ಮುಸ್ಲಿಮರು (11%), ಕ್ರೈಸ್ತರು (4%), ಜೈನರು (0.78%) ಮತ್ತು ಬೌದ್ಧರು (0.73%) ವಾಸವಾಗಿದ್ದಾರೆ.

ಮೃದು ಮಧುರವಾದ ಕನ್ನಡ ಭಾಷೆಯ ಬಗ್ಗೆಯೂ ಅಭಿಮಾನದ ನುಡಿಗಳನ್ನು ಹೇಳದಿರುವ ಕವಿಗಳಿಲ್ಲ.

*ಸುಲಿದ ಬಾಳೆಯ ಹಣ್ಣಿನಂದದಿ*
*ಕಳಿದ ಸಿಗುರಿನ ಕಬ್ಬಿನಂದದಿ*
*ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ*
*ಲಲಿತವಹ ಕನ್ನಡದ ನುಡಿಯಲಿ*
*ತಿಳಿದು ತನ್ನೊಳು ತನ್ನ ಮುಕ್ತಿಯ*
*ಗಳಿಸಿಕೊಂಡರೆ ಸಾಲದೇ ಸಂಸ್ಕೃತದೊಳಿನ್ನೇನು?*

ಕನ್ನಡ ಭಾಷೆ ತನ್ನ ಸತ್ವವನ್ನು ಕಳೆದುಕೊಳ್ಳುವಷ್ಟು ಸಂಸ್ಕೃತಕ್ಕೆ ಮಾರುಹೋಗದೆ ಇರುವುದು ಕನ್ನಡಿಗರ ಪುಣ್ಯ ವಿಶೇಷ. ಸಂಸ್ಕೃತ ಪದಗಳು ಕನ್ನಡದ ಜಾಯಮಾನಕ್ಕೆ ಹೊಂದಿಕೊಂಡು ಬಳಕೆಯಾಗಿವೆ. ಕನ್ನಡಕ್ಕೆ ಬಂದ ಅನ್ಯ ತದ್ಭವಗಳಂತೂ ಕನ್ನಡ ದೇಶ್ಯ ಪದಗಳೇ ಹೌದೆನ್ನುವಷ್ಟು ಕನ್ನಡ ನುಡಿಯೊಡನೆ ಬೆರೆತು ಬೆಸುಗೆಗೊಂಡಿವೆ.

ಕನ್ನಡಿಗರು ಸ್ವಾಭಿಮಾನಿಗಳು, ಸಮನ್ವಯ ಮನೋಭಾವದವರು, ಕ್ಷಾತ್ರರೂ, ಸೌಂದರ್ಯಪ್ರಿಯರೂ, ಪರಮತ ಸಹಿಷ್ಣುಗಳೂ ಆಗಿದ್ದು ಸೊಗಸಾದ ಮಾತುಗಾರರು ಜಾಣರು, ಒರೆಹಚ್ಚಬಲ್ಲ ಶಕ್ತಿಯುಳ್ಳವರು, ಓದದೆಯೂ ಕಾವ್ಯಸಾರವನ್ನು ಹೀರಬಲ್ಲವರು, ಮಕ್ಕಳು ಮೂಗರು ಕೂಡ ವಿವೇಕವನ್ನು ಹೇಳಬಲ್ಲವರು. ಆದ್ದರಿಂದಲೇ ಕನ್ನಡಿಗರನ್ನು ಮೆಚ್ಚಿ ನೃಪತುಂಗ ಹೀಗೆ ಹೇಳಿರುವುದು:

*ಪದನರಿದು ನುಡಿಯಲುಂ, ನುಡಿ*
*ದುದನಾರಯಲುಂ, ಆರ್ಪರಾ ನಾಡವರ್ಗಳ್,*

*ಚದುರರ್ ನಿಜದಿಂ ಕುಱಿತೋ*
*ದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್*

*ಕುಱಿತವರಲ್ಲದೆ ಮತ್ತಂ*
*ಪೆಱರುಂ ತಂತಮ್ಮ ನುಡಿಯೊಳಗೆಲ್ಲಂ ಜಾಣರ್*
*ಕಿಱು ಮಕ್ಕಳುಂ ಆ ಮೂಗರು*
*ಮಱಿಪಲ್ಕಱಿವರ್ ವಿವೇಕಮಂ ಮಾತುಗಳು*

ಕರ್ನಾಟಕದ ದೊರೆಗಳು ಉದಾರಿಗಳೂ, ಧರ್ಮ ಸಹಿಷ್ಣುಗಳೂ ಆಗಿದ್ದರು. ಕನ್ನಡ ಕವಿಗಳೂ, ಸಂತರೂ ಮಾನವ ವರ್ಗದ ಸಮಾನತೆಯನ್ನೂ, ಮನುಷ್ಯ ಮನುಷ್ಯರ ಮಧ್ಯೆ ಇರಬೇಕಾದ ಪರಸ್ಪರ ಸೌಹಾರ್ದ ಸ್ನೇಹ ಬಾಂಧವ್ಯ ಗುಣಗಳನ್ನೂ ತಮ್ಮ ಕೃತಿಗಳಲ್ಲಿ ಒಡಮೂಡಿಸಿ, ಬೋಧಿಸಿ, ಹಾಡಿ ಹೊಗಳಿದ್ದಾರೆ. ಬದುಕಿನಲ್ಲಿ ಬಾಳಿ ತೋರಿಸಿದ್ದಾರೆ. "ಕಸವರಮ್ ಎಂಬುದು ನೆರೆ ಸೈರಿಸಲ್ ಆರ್ಪೊಡೆ ಪರವಿಚಾರಮುಮಂ ಪರಧರ್ಮಮುಮಂ" (ಅನ್ಯರ ವಿಚಾರಗಳನ್ನೂ, ಅನ್ಯರ ಧರ್ಮವನ್ನೂ ಸಹನೆಯಿಂದ ನೋಡುವುದೇ ನಿಜವಾದ ಐಶ್ವರ್ಯ) ಎಂದು ಕವಿರಾಜಮಾರ್ಗಕಾರ ಬಹುದೊಡ್ಡ ಮಾತನಾಡಿದ್ದಾನೆ. ಇದು ಕರ್ನಾಟಕ ಸಂಸ್ಕೃತಿಯ ಹುಟ್ಟುಗುಣವೂ ಹೌದು. ಮಣ್ಣಿನ ಮಕ್ಕಳ ಸಮನ್ವಯ ಸಂಬಂಧವೂ ಹೌದು. "ಮನುಷ್ಯ ಜಾತಿ ತಾನೊಂದೆ ವಲಂ" ಎಂಬ ಮಾತು ಪಂಪನ ಪೆಂಪಿನನುಡಿ. ಮನುಷ್ಯ ವರ್ಗವೆಲ್ಲ ಒಂದೇ ಎಂಬ ತತ್ತ್ವವನ್ನು ಕನ್ನಡಿಗರು ತಮ್ಮ ಧರ್ಮದ ಚೌಕಟ್ಟಿನಲ್ಲಿ ಕಂಡುಕೊಂಡ ಬಗೆ ಇದು. "ಜಾತಿ ಸಂಕರವಿಲ್ಲ ಜಡದೇಹಿಗಳಿಲ್ಲ, ನೀತಿಹೀನರು ಚೋರರಿಲ್ಲ। ಘಾತುಕರಿಲ್ಲದ ದುರ್ಜನರಿಲ್ಲ ಕರ್ನಾಟಕ। ರೀತಿಯನೆಂತು ಬಣ್ಣಿಪೆನು" ಎಂದು ಗೋವಿಂದ ವೈದ್ಯ ಹೇಳಿದ್ದಿದೆ. ಒಟ್ಟಿನಲ್ಲಿ ಕನ್ನಡಿಗರು ಶೂರರು, ಸ್ವಾಭಿಮಾನಿಗಳು, ಸಾಧುಗಳು, ಸಮನ್ವಯಿಗಳು. ಕನ್ನಡಿಗರ ಸ್ವಾಭಿಮಾನಕ್ಕೆ ಸಂದ ಕಾಣ್ಕೆ ಈ ಶಾಸನ :

*ಸಾಧುಗೆ ಸಾಧು, ಮಾಧುರ್ಯಂಗೆ ಮಾಧುರ್ಯಂ*
*ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್*
*ಮಾಧವನೀತನ್ ಪೆರನಲ್ಲ ॥*

(ಬಾದಾಮಿ ಶಾಸನ)

# ಅಧ್ಯಾಯ ೩

## ಕರ್ನಾಟಕದಲ್ಲಿ ಕ್ರೈಸ್ತ ಧರ್ಮದ ಬೆಳವಣಿಗೆ

ಕಪ್ಪುನೆಲ ಕರ್ನಾಟಕಕ್ಕೆ ಕ್ರೈಸ್ತಧರ್ಮದ ಪ್ರವೇಶ ಯಾವ ಶತಮಾನದಲ್ಲಿ ಆಯಿತು ಎಂದು ಇತಿಹಾಸಕಾರರು ನಿಖರವಾಗಿ ಹೇಳಿಲ್ಲ. ಕರ್ನಾಟಕ ಇರಲಿ ಭಾರತಕ್ಕೇ ಕ್ರೈಸ್ತ ಧರ್ಮದ ಆಗಮನವಾದ ಇಸವಿಯೇ ಸರಿಯಾಗಿ ತಿಳಿದಿಲ್ಲವೆಂದ ಮೇಲೆ ಕರ್ನಾಟಕದ ಗತಿಯೇನು? ಯೇಸುಕ್ರಿಸ್ತನ ಶಿಷ್ಯರಲ್ಲೊಬ್ಬನಾದ ಥೋಮಸ್ ಭಾರತಕ್ಕೆ ಮೊದಲು ಬಂದವನೆಂಬುದು ಒಂದು ಸಂಪ್ರದಾಯವಷ್ಟೇ!

ಚಾರಿತ್ರಿಕ ಮಾಹಿತಿ ಖಚಿತವಾಗಿ ದೊರೆಯದೆ ಹೋದರೆ ನಾವು ಇತರ ಮೂಲಗಳನ್ನು ಪರಿಶೀಲಿಸಬೇಕಾಗುತ್ತದೆ. ಅವು ದಂತ ಕಥೆಗಳಾಗಿರಬಹುದು, ಪರಂಪರೆ ಸಂಪ್ರದಾಯವಾಗಿರಬಹುದು, ಜಾನಪದವಾಗಿರಬಹುದು ಇಲ್ಲವೆ ಸ್ಮಾರಕಗಳಾಗಿರ ಬಹುದು. ಅಲೆಕ್ಸಾಂಡರನ ದಂಡಯಾತ್ರೆ(ಕ್ರಿ.ಪೂ. 334–326)ಯಿಂದ ಗ್ರೀಕರು ಭಾರತದ ಸಿಂಧೂಕಣಿವೆ ಹಾಗೂ ಗಂಗಾನದೀ ತೀರದ ನಾಗರಿಕತೆಯನ್ನು ಪರಿಚಯಿಸಿ ಕೊಂಡರು. ಕ್ರಿ.ಶ. ಒಂದನೆಯ ಶತಮಾನದ ಮಧ್ಯದಲ್ಲಿ ಅವರು ದಕ್ಷಿಣಭಾರತಕ್ಕೆ ವಿಶೇಷವಾಗಿ ಪಶ್ಚಿಮ ಕರಾವಳಿಗೆ ಬಂದು ಹೋಗುತ್ತಿದ್ದರು. (ಇ.ಆರ್. ಹಂಬೇ. ಯೇ. ಸ) ಮತ್ತು ಅಗಸ್ಟಸ್ ಸೀಜರನ ಕಾಲದಿಂದ ರೋಮನ್ನರು ಕರಾವಳಿ ಪ್ರದೇಶಗಳಲ್ಲಿ ವಾಣಿಜ್ಯ ವ್ಯವಹಾರವನ್ನು ನಡೆಸುತ್ತಿದ್ದರು ಎಂಬ ಖಚಿತ ರಚಿತ ದಾಖಲೆಯಿದೆ. ಅವರು ವಿಶೇಷವಾಗಿ ಕರ್ನಾಟಕದ ಕರಾವಳಿ ಪ್ರದೇಶ ಹಾಗೂ ದೊಡ್ಡಸಮುದ್ರದ ಸುತ್ತಲಿನ ದೇಶಗಳ ನಡುವೆ ವಾಣಿಜ್ಯ ವ್ಯವಹಾರ ಇರಿಸಿಕೊಂಡಿದ್ದರೆಂದು ಒಂದನೇ ಟಾಲಮೀ (ಕಿ.ಪೂ. 4ನೇ ಶತಮಾನ) ಮತ್ತು ಫ್ಲೀನಿ (ಕ್ರಿ.ಶ.23–79) ಅವರು ಲಿಖಿತ ದಾಖಲೆ ಮಾಡಿದ್ದಾರೆ. ಕ್ರಿ.ಶ. ಎರಡನೆಯ ಶತಮಾನದ ಅಂತ್ಯದಲ್ಲಿ ಅಲೆಕ್ಸಾಂಡ್ರಿಯದ ಪಾಂತೆನುಸ್ ಎಂಬವರು ಶಭಸಂದೇಶ ಪ್ರಚಾರಕ್ಕೆಂದು ಭಾರತಕ್ಕೆ ಬಂದಾಗ ಇಲ್ಲಿ ಅವರಿಗೆ ಹೀಬ್ರೂ ಭಾಷೆಯಲ್ಲಿ ಬರೆದಿರುವ ಮತ್ತಾಯ ರಚಿತ ಶುಭಸಂದೇಶವನ್ನು ಓದುವವರು ಸಿಕ್ಕಿದರೆಂದು ಕಾರ್ಡಿನಲ್ ತೆಸ್ಸೆರಾಂತ್ ಅಭಿಪ್ರಾಯಪಡುತ್ತಾರೆ. (ನೋಡಿ : *A.L.P. D'Souza, History of the Catholic Community of South Canara, 1983. P. 19-20).*

ಕೆನರಾ ಕರಾವಳಿಯಲ್ಲಿ ಕಂಡ ಸಂತ ಮತ್ತಾಯನ ಶುಭಸಂದೇಶದ ಪ್ರತಿ ಸಂತ ಬಾರ್ತೊಲೊಮಾಯರು ಅಲ್ಲಿ ಬಿಟ್ಟು ಬಂದ ಪ್ರತಿಯಾಗಿತ್ತು ಎಂದು ಕೆಲವರ ವಾದ. ಇದನ್ನು ಯೇಸುಸಭೆಯ ಇತಿಹಾಸಗಾರ ಫಾದರ್ ಫೆರೋಲಿ ಸಮರ್ಥಿಸುತ್ತಾರೆ. ಅಂದರೆ ಬಾರ್ತೊಲೋಮಾಯ ಕೆನರಾ ಕರಾವಳಿ ಪ್ರದೇಶಕ್ಕೆ ಮೊದಲೇ ಬಂದಿದ್ದಿರ ಬೇಕು. ಜನತೆಯ ಮೌಖಿಕ ಪರಂಪರೆಯ ಪ್ರಕಾರ, ಬಾರ್ತೊಲೋಮಾಯ ಕಲ್ಯಾಣ ಪುರದ ಕೋಟೆಯ ಪಕ್ಕದ ದೇವಾಲಯವೊಂದರ ಆವರಣದಲ್ಲಿ ತಂಗಿದ್ದು ಶುಭ ಸಂದೇಶವನ್ನು ಪ್ರಸಾರ ಮಾಡಿದನು. ಈ ಆಧಾರದ ಮೇಲೆ ಫಾದರ್ ಹೆಚ್.ಒ. ಮಸ್ಕರೇನಸ್ ತಮ್ಮ "ಕೊಂಕಣಾಚೆಂ ಕ್ರಿಸ್ತಾಂವ್‌ಪಣ್" ಎಂಬ ಕೃತಿಯಲ್ಲಿ "ದಕ್ಷಿಣ ಕನ್ನಡದ ತುಳುನಾಡಿನಲ್ಲಿ ಕಲ್ಯಾಣಪುರ ಇದೆ. ಇಲ್ಲಿ ಬೇತಾಳ್ ಎಂದು ಕರೆಯಲ್ಪಡುವ ಜನರಿಗೆ ಸಂತ ಬಾರ್ತೊಲೋಮಾಯ ಶುಭಸಂದೇಶವನ್ನು ಪ್ರಚಾರ ಮಾಡಿದನು" ಎಂದು ಬರೆದಿದ್ದಾರೆ. ಅಪೊಸ್ತಲಿಕ್ ಡೆಲಿಗೆಟ್ ಆಗಿದ್ದ ಎಲ್.ಜಲೇಕ್ಸಿ (1892–1916) ತಮ್ಮ 'ಲೆಸ್ ಒರಿಜಿನೆಸ್ ದು ಕ್ರಿಸ್ತಿಯಾನಿಸಿಮೆ ಜೊಕ್ಸ್ ಇಂದೆಸ್' ಎಂಬ ಗ್ರಂಥದಲ್ಲಿ "ಕಲ್ಯಾಣಪುರದಲ್ಲಿ ಸಂತ ಬಾರ್ತೊಲೋಮಾಯ ಒಂದು ದೇವಾಲಯವನ್ನು ನಿರ್ಮಿಸಿದನು ಹಾಗೂ ಅಲ್ಲಿ ಒಂದು ಕ್ರೈಸ್ತ ಸಮುದಾಯವಿತ್ತು" ಎಂಬ ಅಭಿಪ್ರಾಯ ತಳೆಯುತ್ತಾರೆ. ಅಂದರೆ ಕರ್ನಾಟಕಕ್ಕೆ ಯೇಸುಕ್ರಿಸ್ತನ ಶಿಷ್ಯನಾದ ಸಂತ ಬಾರ್ತೊಲೋಮಾಯ ಮೊತ್ತಮೊದಲಿಗೆ ಬಂದನೆಂಬ ಅಭಿಪ್ರಾಯವನ್ನು ಕೆಲವು ಇತಿಹಾಸಕಾರರು ಪ್ರತಿಪಾದಿಸುತ್ತಾರೆ.

ಮತ್ತೆ ಕೆಲವು ಚರಿತ್ರೆಕಾರರು ಭಾರತಕ್ಕೆ ಅದರಲ್ಲೂ ಮಲಬಾರಿಗೆ ಸಂತ ಥೋಮಸನು ಕ್ರಿ.ಶ. 52ರಲ್ಲೇ ಬಂದಿದ್ದ ಎಂದು ಹೇಳುತ್ತಾರೆ. ಆತ ಕರಾವಳಿಗೂ ಬಂದಿದ್ದನೆಂದೂ, ತುಳುನಾಡಿನ ಕಲ್ಯಾಣಪುರ ಪ್ರದೇಶದಲ್ಲಿಯೇ ಅಲ್ಲದೆ ಇತರ ಕಡೆಗಳಲ್ಲೂ ಶುಭಸಂದೇಶ ಪ್ರಚಾರ ಮಾಡಿದನೆಂದು ಕೊಂಕಣಿ ಕ್ರೈಸ್ತರಲ್ಲಿ ಮೌಖಿಕ ಪರಂಪರೆಯಿದೆ ಎಂದು ಶ್ರೀ ಗಾಸ್ಪರ್ ಲುವಿಸ್ ತಿಳಿಸುತ್ತಾರೆ. ಇದು ಸಾಧ್ಯವೂ ಇರಬಹುದು. ಏಕೆಂದರೆ ಕರ್ನಾಟಕದ ಕರಾವಳಿಗೆ ಕೇರಳರಾಜ್ಯ ಹೊಂದಿಕೊಂಡಿದೆ. ಅಲ್ಲದೆ ಇವರ ಮಧ್ಯೆ ಕೊಳು–ಕೊಡುಗೆ ಅಂದಿಗೂ ಇತ್ತು ಮತ್ತು ಈಗಲೂ ಇದೆ. ಜನಪ್ರಿಯ ಐತಿಹಾಸಿಕ ಕನ್ನಡ ಜನಪದ ಕಾವ್ಯ "ಪಿರಿಯಾಪಟ್ಟಣದ ಕಾಳಗ" ಆರಂಭವಾಗುವುದೇ ಕೊಡಗು–ಮಲಯಾಳ ದೇಶದ ಗಡಿಯೊಂದಿಗೆ. ಅಲ್ಲದೆ ಭಾರತಕ್ಕೆ ಬಂದು ಹೋದ ಪ್ರವಾಸಿಗರೂ ಈ ಅಭಿಪ್ರಾಯವನ್ನು ಪುಷ್ಟೀಕರಿಸಿದ್ದಾರೆ:

ಕರ್ನಾಟಕ ದೇಶವು ಕರಾವಳಿಯಲ್ಲಿರುವ ಗಂಗಾವಳಿಯಿಂದ ಮಲಬಾರಿನ ಜಾಮೊರಿನ್ ದೇಶದವರೆಗೆ ಹಬ್ಬಿದೆ ಎಂದು ಸ್ಥಳದವರಿಂದ ತಿಳಿಯಿತು. ಮತ್ತು ಒಳ ನಾಡಿನಲ್ಲಿ ಸೊಂದಾದವರೆಗೂ, ಸೆರ್ಜಿಖಾನನ ರಾಜ್ಯದವರೆಗೂ ಹಬ್ಬಿದೆಯಂತೆ. ಕರ್ನಾಟಕ ದೇಶದ ರಾಜಧಾನಿ ಬೆದನೂರು (Bedanur =ಬಿದನೂರು) ಮಲಬಾರಿನಲ್ಲಿ ಆಳುವ ಜನ ನಾಯರ್‌ಗಳೆಂದು ಹೆಸರಿಟ್ಟುಕೊಂಡರೆ ಇಲ್ಲಿಯ (ಕರ್ನಾಟಕ)ವರು ನಾಯಕ ಎಂದು ಇಟ್ಟುಕೊಳ್ಳುತ್ತಾರೆ. ಮಲಬಾರಿನಿಂದ ಸೂರತ್‌ವರೆಗೆ ಇರುವ ಜನರ ಭಾಷೆ

ಕನೋರಿನ್ (Canorein=ಕನರೀಸ್=ಕನ್ನಡ). ಇದು ಪ್ರಾಚೀನವಾದ ಭಾಷೆ. ಆ ನಾಡಿನ ಭಾಷೆಗಿರುವಂತೆ ನಾಡಿಗೂ ಕನೋರಿನ್ ಎಂದೇ ಹೆಸರು. ಅಲ್ಲಲ್ಲಿ ಆಡುವ ಭಾಷೆಯಲ್ಲಿ ಕೊಂಚ ವ್ಯತ್ಯಾಸವಿರುತ್ತದೆ ಎಂದು ಜಾನ್‌ಫ್ರೈಯರ್ ತನ್ನ ಪ್ರವಾಸ ಕಥನದಲ್ಲಿ ಬರೆದಿದ್ದಾನೆ. *(ನೋಡಿ : ಎಚ್.ಎಲ್.ನಾಗೇಗೌಡ, ಪ್ರವಾಸಿ ಕಂಡ ಇಂಡಿಯ, ಸಂಪುಟ 7, ಪುಟ 207)*

The close connection of the greater part of Mysore with Malabar and the west Coast, offers ground for supposing that Christian influences may even at that early period have been extended to this country. *(ನೋಡಿ : B.L. Rice, Mysore : a Gazetteer, Vol 1, 1897, P. 480)*

ಕ್ರಿ.ಶ. ಒಂದನೇ ಶತಮಾನದಲ್ಲಿ ಗುಂಡಫೊರೋಸ್ ಎಂಬ ಶಕ್ತಿವಂತ ರಾಜನೊಬ್ಬ ಭಾರತದ ವಾಯುವ್ಯದ ಕಡೆಯಲ್ಲಿ ಆಳುತ್ತಿದ್ದು, ಆತನ ಹೆಸರು ಸಿರಿಯಾ, ಏಷ್ಯಾ ಮತ್ತು ಆಫ್ರಿಕಾಗಳ ಮೆಡಿಟರೇನಿಯಾ ಪ್ರದೇಶಗಳಲ್ಲಿ ಕೇಳಿ ಬರುತ್ತಿದ್ದು; ಇವನ ರಾಜ್ಯಕ್ಕೇನೆ ಕ್ರಿಸ್ತನ ಶಿಷ್ಯರಲ್ಲೊಬ್ಬನಾದ ಸಂತ ಥೋಮಸನು ಮೊಟ್ಟ ಮೊದಲು ಬಂದದ್ದು ಎಂದು ಹೇಳುವವರಿದ್ದಾರೆ. ಸಂತ ಥೋಮಸನನ್ನು ಆದರದಿಂದ ಬರಮಾಡಿ ಕೊಂಡ ದೊರೆ ಗುಡ್ನಾಫರ್ ಅಥವಾ ಗುಂಡಫೊರೋಸ್ ಕನ್ನಡಿಗನೆಂದೂ ಒಂದು ವಾದವಿದೆ. ಅವನು ಮೈಸೂರಿನ ಕುಟ್ನಾಸ್ಫಾರ್ ಅಥವಾ ಕಂದಪ್ಪ ಎಂಬುದು ಅನೇಕ ವಿದ್ವಾಂಸರ ಮತವಾಗಿದೆ. ಮಧ್ಯಪ್ರಾಚ್ಯ ಹಾಗೂ ಪೂರ್ವ ಯೂರೋಪಿನ ಕ್ರೈಸ್ತರು ಆ ಕಾಲದಲ್ಲಿ ಕರ್ನಾಟಕದ ಕರಾವಳಿಯಲ್ಲಿ ಪ್ರಾಯಶಃ ಇದ್ದಿರಲೂಬಹುದು. ಈ ಊಹೆಗೆ ಪೂರಕವಾಗಿ ಮಲಬಾರಿನ ಕ್ರೈಸ್ತ ಜನಪದಗೀತೆಗಳಲ್ಲಿ ಕನ್ನಡ ಪದಗಳ ಹಾಗೂ ಸಂಪ್ರದಾಯದ ತುಣುಕುಗಳು ಕಾಣಿಸುತ್ತವೆ.

'ರಂಭನ್‌ಪಾಟು' ಎಂಬ ಮಲಯಾಳಂ ಕ್ರೈಸ್ತ ಲಾವಣಿಯಲ್ಲಿ ಒಟ್ಟು 448 ಸಾಲುಗಳಿದ್ದು, ಸಂತ ಥೋಮಸನು ಕೇರಳಕ್ಕೆ ಬಂದದ್ದು ಮತ್ತು ಅಲ್ಲಿ ಆತನ ಮಿಷನರಿ ಚಟುವಟಿಕೆ ಹಾಗೂ ಮತ ಪ್ರಚಾರದ ಉಲ್ಲೇಖವಿದೆ. ಮಲಬಾರಿನ ಕ್ರೈಸ್ತರು ಈ ಲಾವಣಿಯನ್ನು ಇಂದಿಗೂ ಹಾಡುತ್ತಾರೆ. ಇದು ತಲೆಮಾರಿನಿಂದ ತಲೆಮಾರಿಗೆ ಹರಿದು ಕೊಂಡು ಬಂದಿರುವುದರಿಂದ ಅಲ್ಲಲ್ಲಿ ಕೆಲವು ವಿಚಾರಗಳ ಸೇರ್ಪಡೆ–ತೀರ್ಪಡೆಗಳ ಸಾಧ್ಯತೆ ಇದೆ. ಫಾ.ಬೆರ್ನಾರ್ಡ್ ಎಂಬವರು ಮೊತ್ತಮೊದಲಿಗೆ ಈ ಲಾವಣಿಯನ್ನು "ಮಾರ್ಥೋಮ ಕ್ರಿಸ್ತಿಯಾನಿಕಳ್" (1916) ಎಂಬ ತಮ್ಮ ಚಾರಿತ್ರಿಕ ಸಂಪುಟದಲ್ಲಿ ಪ್ರಕಟಿಸಿದ್ದಾರೆ. ಫಾ. ಎ.ಎಂ.ಮುಂಡದನ್ ಅವರು ಇದರ ವೈಜ್ಞಾನಿಕ ಅಂಶಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ವಾಕ್ ಸಂಪ್ರದಾಯದ ಈ ರಂಭನ್ ಲಾವಣಿಗೂ ಪ್ರಾಚ್ಯ ವಸ್ತುಶೋಧನಾ ಶಾಸ್ತ್ರಕ್ಕೂ ಇರುವ ಸಾಮ್ಯ – ಸಂಬಂಧಗಳನ್ನು ಕುರಿತು ಚಿಂತಿಸಿದ್ದಾರೆ.

ಸಂತ ಥೋಮಸನು ಕರ್ನಾಟಕಕ್ಕೆ ಬಂದಿದ್ದನೆಂದು ಹೇಳಲು ಒಂದು ಬಲವಾದ ಆಧಾರವಿದೆ. ಸಂತ ಥೋಮಸನ ಸಮಾಧಿಗೆ ಉಂಬಳಿ ನೀಡಿದ ಶಾಸನದಲ್ಲಿ (1396) ವಿಜಯನಗರದ ಬುಕ್ಕರಾಯನ ಹೆಸರಿದೆ. ಕಾರವಾರದ ಬಳಿಯ ಅಂಜೆದೀವ ದ್ವೀಪದಲ್ಲಿ ದುರ್ಗವೊಂದನ್ನು ನಿರ್ಮಿಸಲು ಪೋರ್ಚುಗೀಸರು ನೆಲವನ್ನು ಅಗೆದಾಗ ಅಲ್ಲಿ ಶಿಲುಬೆಯ ಗುರುತಿನ ಕಲ್ಲುಗಳು ದೊರೆತಿದ್ದವೆಂದು ತಿಳಿದು ಬರುತ್ತದೆ.

## ಅಂಜೆದೀವ :



ಅಂಜೆದೀವ ದ್ವೀಪದಲ್ಲಿ ಇರುವ ಪ್ರಸಕ್ತ ಚರ್ಚಿನ

ಕಾರವಾರದ ನೈರುತ್ಯಕ್ಕೆ ಸುಮಾರು ಐದು ಕಿ.ಮೀ. ದೂರದಲ್ಲಿರುವ ಬಿಣಗಾಹಳ್ಳಿಯ ಕರಾವಳಿಯ ಆಚೆ ಅಂಜೆದೀಪ ಎಂಬ ಪುರಾತನ ನಡುಗಡ್ಡೆ ಇದೆ. ಅಂಜಿ–ಎಂದರೆ ಐದು ಮತ್ತು ದೀವ–ಎಂದರೆ ನಡುಗಡ್ಡೆ ಎಂಬ ಎರಡು ಪದಗಳಿಂದ ಈ ಹೆಸರು ಬಂದಿದೆ. ಅಂಜೆದೀವ ಎಂದರೆ ಐದು ನಡುಗಡ್ಡೆಗಳ ಸಮೂಹ ಎಂದು ಅರ್ಥ. ಈ ನಡುಗಡ್ಡೆಗೆ ತನ್ನದೇ ಆದ ಐತಿಹ್ಯವಿದೆ. ಕ್ರಿ.ಶ. ಆರಂಭದಲ್ಲೇ ಟಾಲ್ಮಿಯು ತನ್ನ ನಕಾಶೆಯಲ್ಲಿ ಈ ಗಡ್ಡೆಯನ್ನು ಗುರುತಿಸಿದ್ದಾನೆ ಮತ್ತು ಇದಕ್ಕೆ 'ಇನ್‌ಸುಲೆ ಇಜಿದಿಯೋರುಮ್' ಎಂಬ ಹೆಸರು ಕೊಟ್ಟಿದ್ದಾನೆ. (ಕ್ರಿ.ಶ.150). ಪ್ರಾಚೀನ ಅರಬ ಪ್ರವಾಸಿಗಳೆಲ್ಲರೂ ಈ ಸ್ಥಳಕ್ಕೆ ಭೇಟಿ ಕೊಟ್ಟಿದ್ದಾರೆ. ಕ್ರಿ.ಶ.1342ರಲ್ಲಿ ಇಬ್ನ ಬಟೂಟನು ಇದರಲ್ಲಿ ಒಂದು ಝರಿಯನ್ನೂ, ಅದರ ಸಮೀಪ ಕುಳಿತಿರುವ ಓರ್ವ ಸಾಧುವನ್ನೂ ಕಂಡುಹಿಡಿದನೆಂದು ತನ್ನ 'ರೇಆ' ಎಂಬ ಗ್ರಂಥದಲ್ಲಿ ನಮೂದಿಸಿದ್ದಾನೆ. ಈ ನಡುಗಡ್ಡೆಯ ಬಗ್ಗೆ ಯೂರೋಪಿನ ಜನರು ಚೆನ್ನಾಗಿ ತಿಳಿದುಕೊಂಡಿದ್ದರು. 1459ರಲ್ಲಿ ಫ್ರಾ. ಮೌರೊನು ತನ್ನ ಜಗತ್ತಿನ ನಕಾಶೆಯಲ್ಲಿ ಇದನ್ನು ಸೇರಿಸಿದ್ದಾನೆ. ವಾಸ್ಕೋಡಿಗಾಮನು ಈ ನಡುಗಡ್ಡೆಗೆ ಭೇಟಿ ಕೊಡದೆ ಯೂರೋಪಿಗೆ ತಿರುಗಿ ಹೋಗಲಿಲ್ಲ. 1500ರಲ್ಲಿ ಕಾಬ್ರಲನ ದಂಡು ಅಂಜೆದೀವದ ಮೇಲೆ ಇಳಿಯಿತು. ಆ ದಂಡಿನ ಜೊತೆ ಬಂದಿದ್ದ ಫ್ರಾನ್ಸಿಸ್ಕನ್ ಗುರುಗಳು ಅಲ್ಲಿ ನೆಲೆಸಿದ್ದ ಸುಮಾರು 25 ಮಂದಿಯನ್ನು ಮತಾಂತರಿಸಿದುದಾಗಿ ಹೇಳುತ್ತಾರೆ. 1500 ರಿಂದ 19–12–1961ರವರೆಗೆ ಈ ನಡುಗಡ್ಡೆ ಪೋರ್ಚುಗೀಸರ ವಶದಲ್ಲೇ ಇತ್ತೆಂದ ಮೇಲೆ ಇಲ್ಲಿ ಕ್ರೈಸ್ತರ ಅಸ್ತಿತ್ವವನ್ನು ಕುರಿತು ಹೇಳಬೇಕಾಗಿಯೇ ಇಲ್ಲ.

"1505ರಲ್ಲಿ ಡಾನ್ ಫ್ರಾನ್ಸಿಸ್ಕೊ ದೆ ಅಲ್ಮೇಡನು ಈ ನಡುಗಡ್ಡೆಯಲ್ಲಿ ಕೋಟೆ ಕಟ್ಟಲು ಪ್ರಾರಂಭಿಸಿದನು. ಅಲ್ಲಿ ಅಗೆಯುವಾಗ ಕೆಲವು "ಕುರುಸು (ಶಿಲುಬೆ)ಗಳು ದೊರೆತವು. (ಶಿಲುಬೆ ಗುರುತಿದ್ದ ಕಲ್ಲುಗಳು) ಇವು ಪೋರ್ಚುಗೀಸರಿಗಿಂತ ಪೂರ್ವದಲ್ಲಿ ಇಲ್ಲಿ ಕ್ರಿಶ್ಚಿಯನ್ ಧರ್ಮ ಅಸ್ತಿತ್ವದಲ್ಲಿದ್ದುದನ್ನು ತೋರಿಸುತ್ತವೆ. ಬಾಸ್ತಾನನ ಹೆಸರಿನಲ್ಲಿ ಒಂದು ಕೋಟೆಯೂ, ಶ್ರೀಮತಿ ಬ್ರೊತಾಸಳ ಹೆಸರಿನಲ್ಲಿ ಒಂದು ದೇವಾಲಯವೂ ಕಟ್ಟಲ್ಪಟ್ಟಿತು. (ಬ್ರೊತಾಸ ಎಂದರೆ ಝರಿ. ಕ್ರಿಶ್ಚಿಯನ್ ಧರ್ಮದ ಪ್ರಾರಂಭವು ಈ

ಝುರಿಯಂತೆ ಅವ್ಯಾಹತವಾಗಿ ಹರಿಯಲೆಂಬುದೇ ಇದರ ತಾತ್ಪರ್ಯ. ಈ ಹೆಸರುಳ್ಳ ಚರ್ಚು ಇಡೀ ಭಾರತದಲ್ಲಿ ಇದೊಂದೇ ಆಗಿದೆ. ಈ ಹೆಸರಿನ ಕೇವಲ ಒಂದೇ ಚರ್ಚು ಪೋರ್ಚುಗಲ್ಲಿನಲ್ಲಿದೆ.) *(ನೋಡಿ : ಅನು : ಎಂ.ಎನ್. ಭಂಡಾರಕರ, ಕಾರವಾರ ಜಿಲ್ಲಾ ದರ್ಶನ, ಪು.124).* 1687ರಲ್ಲಿ "ಲೇಡಿ ಆಫ್ ಬ್ರೊತಾಸ್" ಎಂಬ ಈ ಚರ್ಚನ್ನು ಪವಿತ್ರೀಕರಿಸಲಾಯಿತು (consecrate) ಎಂದು ತಿಳಿದು ಬರುತ್ತದೆ.

ಕ್ರಿ.ಶ.1672ರಲ್ಲಿ ಕರ್ನಾಟಕದಲ್ಲಿ ಪ್ರವಾಸ ಕೈಗೊಂಡ ಜಾನ್ ಫ್ರೈಯರ್ ತನ್ನ ಪ್ರವಾಸ ಕಥನದಲ್ಲಿ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಕ್ರೈಸ್ತರನ್ನು ಕುರಿತು ಹೀಗೆ ಬರೆದಿದ್ದಾನೆ.

"ನಾವು ನಮ್ಮ ಸಮುದ್ರ ಯಾನವನ್ನು ಮುಂದುವರಿಸಿ ಮಲಬಾರ್ ತೀರವನ್ನು ಹಾದು ಕನಾಟಿಕ್ (canatic=ಕರ್ನಾಟಕ) ತೀರದಲ್ಲಿರುವ ಬಟ್ಟಿಕಲೈ (Batticalai= ಭಟ್ಕಳ) ಸಮೀಪದಲ್ಲಿರುವ ಒನೋರ್ (ಹೊನ್ನಾವರ) ಮುಟ್ಟಿದೆವು. ಹೊನ್ನಾವರಕ್ಕೆ ಬಂದ ಮಾರನೆಯ ದಿನ ನಾನು ಊರು ನೋಡಲು ಹೋದೆ. ಇಲ್ಲಿ ಡಚ್ಚರಿಗೆ ಸೇರಿದ ಒಂದು ಮನೆ ಇದೆ. ಊರಿನ ಒಂದು ಕಡೆ ಪೋರ್ಚುಗಲ್ಲರು ಕಟ್ಟಿದ ದುರ್ಗ (castle) ಇದೆ. ಇದನ್ನು ಕಟ್ಟಿದವರು ಪೋರ್ಚುಗಲ್‌ರಾದರೂ ಕನರೀನರು (canareens) ಡಚ್ಚರ ಸಹಾಯದಿಂದ ತಮ್ಮ ವಶಮಾಡಿ ಕೊಂಡಿದ್ದಾರೆ. ಈ ಊರು ಡಚ್ಚರು ಮತ್ತು ಪೋರ್ಚುಗಲ್‌ರಲ್ಲಿ ಹಂಚಲ್ಪಟ್ಟಿದೆ. ಇಲ್ಲಿರುವ ಬಹುತೇಕ ಜನ ಕ್ರೈಸ್ತ ಮತಕ್ಕೆ ಸೇರಿದವರು. ನಾಯರ್‌ಗಳಾಗಲೀ ಮೂರರಾಗಲೀ ಇಲ್ಲ. ಜನರು ಭಯ ಭೀತಿಗಳಿಲ್ಲದೆ ಬೀದಿಗಳಲ್ಲಿ ತಿರುಗಾಡುತ್ತಾರೆ. ಕಟ್ಟುಕಟ್ಟಳೆಗಳನ್ನು ಜನರು ಶಿಸ್ತಿನಿಂದ ಆಚರಿಸುತ್ತಾರೆ. *(ನೋಡಿ : ಎಚ್.ಎಲ್.ನಾಗೇಗೌಡ, ಪ್ರವಾಸಿ ಕಂಡ ಇಂಡಿಯಾ ಸಂ. 7. ಪು.152-153).*

ಮತ್ತೊಂದು ಬಹಳ ಮುಖ್ಯವಾದ ವಿಚಾರವೆಂದರೆ, ಕನ್ನಡನಾಡು ಆ ಕಾಲಕ್ಕೆ ಬಹಳ ವಿಸ್ತಾರವಾಗಿ ಬೆಳೆದಿತ್ತು. ಮೈಸೂರುರಾಜ್ಯ ಎಂದು ಕರೆಸಿಕೊಳ್ಳುತ್ತಿದ್ದ ಕನ್ನಡನಾಡು ತನ್ನ ಇಂದಿನ ಎಲ್ಲೆ ಮೀರಿ ಕಾಲು ಚಾಚಿತ್ತು. ಮದ್ರಾಸು ಪ್ರಾಂತ್ಯದ ನೀಲಗಿರಿ, ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳು ಸೇರಿದ್ದವು. ಜೊತೆಗೆ ಕೊಳ್ಳೇಗಾಲ, ಕೃಷ್ಣಗಿರಿ, ಹೊಸೂರು ಮತ್ತು ಮಡಕಸಿರ ತಾಲ್ಲೂಕುಗಳೂ ಸೇರಿದ್ದವು. ಅಂದರೆ ಮದರಾಸಿಗೂ ಕರ್ನಾಟಕಕ್ಕೂ ಒಂದನೇ ಶತಮಾನದಿಂದಲೂ ಸಂಪರ್ಕವೇರ್ಪಟ್ಟಿತ್ತು. ಆದ್ದರಿಂದ ಸಂತ ಥೋಮಸ್ ಮದ್ರಾಸಿನ ಬಳಿಯ ಮೈಲಾಪುರದಲ್ಲಿ ಸಮಾಧಿಯಾಗಿ ದ್ದಾನೆ ಎಂದರೆ, ಅವನು ಖಂಡಿತ ಕನ್ನಡನಾಡಿನ ಗಡಿಗಳನ್ನಾದರೂ ತುಳಿದಿರಬೇಕು. ಕನ್ನಡಿಗರು ಕೂಡ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಹರಿದು ಹಂಚಿ ಹೋಗಿದ್ದರು. ಹೀಗಾಗಿ ಸಂತ ಥೋಮಸನ ಕಾಲದಲ್ಲಿಯೇ ಕನ್ನಡಿಗರಿಗೆ ಕ್ರೈಸ್ತಮತದ ಪರಿಚಯ ವಾಗಿರಲೇಬೇಕೆಂಬುದರಲ್ಲಿ ಸಂಶಯವಿಲ್ಲ.



**ರೆ.ಉತ್ತಂಗಿ ಚೆನ್ನಪ್ಪ**

ಹನ್ನೆರಡನೆಯ ಶತಮಾನ ವಚನಗಳ ಯುಗ. ಆಗ ವಚನಾಂದೋಳನ ದೇವರ ದಾಸಿಮಯ್ಯನಿಂದ ಪ್ರಾರಂಭವಾಗಿ ಬಸವಣ್ಣ ಪ್ರಮಥಾಧಿಗಳಿಂದ ಮುಂದುವರಿಯಿತು. ಬಸವಣ್ಣನವರೇ ಅಂದಿನ ಸಾಮಾಜಿಕ ಮೌಲ್ಯಗಳ ಕುರಿತು ವಚನಗಳನ್ನು ಬರೆದರು. ಕ್ರೈಸ್ತಮತ ಬಿಜಾಪುರದಲ್ಲಿ ಹನ್ನೆರಡನೆಯ ಶತಮಾನಕ್ಕಾಗಲೇ ಪ್ರಚಲಿತದಲ್ಲಿದ್ದು ಬಸವಣ್ಣನವರು ತಮ್ಮ ವಚನಗಳಲ್ಲಿ ಕ್ರೈಸ್ತಮತಕ್ಕೆ ಹತ್ತಿರವಾದ ವಿಚಾರಗಳನ್ನು ಹೇಳಿರುವುದಿದೆ. ಆದರೆ ತಮ್ಮ ವಚನಗಳಲ್ಲಿ ನೇರವಾಗಿ ಕ್ರೈಸ್ತಮತವನ್ನು ಕುರಿತು ಹೇಳಿರುವುದಿಲ್ಲ. ಬಸವಣ್ಣನವರನ್ನೂ ವೀರಶೈವ ಮತವನ್ನೂ ಕ್ರೈಸ್ತಮತದ ಜೊತೆಜೊತೆಯಲ್ಲಿ ತುಲನೆಮಾಡಿ ನೋಡಿರುವ ರೆವರೆಂಡ್ ಉತ್ತಂಗಿ ಚೆನ್ನಪ್ಪನವರೂ ಈ ಒಂದು ಅಂಶವನ್ನು ಗುರುತಿಸಲು ಪ್ರಯತ್ನಿಸಿದಂತೆ ಕಾಣುವುದಿಲ್ಲ. ಬಸವಣ್ಣನವರ ಅನುಭವದಲ್ಲಿ ಕ್ರೈಸ್ತಮತ ಮಿಳಿತವಾಗಿರುವುದನ್ನು ಮಾತ್ರ ಗುರುತಿಸುತ್ತ, ವಚನಗಳಲ್ಲಿ ಕ್ರೈಸ್ತ ವಿಚಾರಗಳು ಇವೇ ಎಂದು ಬೆರಳು ಮಾಡಿ ತೋರುವಂತೆ ನಿಖರವಾಗಿ ಹೇಳಿಲ್ಲ.

ಕ್ರೈಸ್ತಮತದ ಮೂಲ ದೇವಪುರುಷ ಯೇಸುಕ್ರಿಸ್ತನ ನಡೆನುಡಿಗಳನ್ನು, ವೀರ ಶೈವ ಧರ್ಮದ ತಳಹದಿಯ ಮೂಲಕಲ್ಲುಗಳಾದ ಬಸವಾದಿ ಶಿವಶರಣರ ಆಚಾರ-ವಿಚಾರಗಳನ್ನು ಪ್ರಮುಖ ಆಧಾರವಾಗಿರಿಸಿಕೊಂಡು ರೆ.ಉತ್ತಂಗಿಯವರು "ಲಿಂಗಾಯತ ಧರ್ಮ ಮತ್ತು ಕ್ರೈಸ್ತಧರ್ಮ" ಎಂಬ ಪುಸ್ತಕ ಬರೆದಿದ್ದಾರೆ. ಅದರಲ್ಲೂ ಶ್ರೀಯುತರು ಬಸವಣ್ಣನವರ ವಚನಗಳಲ್ಲಿ ಉಪಯೋಗವಾಗಿರುವ ಕ್ರೈಸ್ತಸಂಬಂಧೀ ಪದಗಳನ್ನು ಗುರುತಿಸಿಲ್ಲ. ಬದಲು ಈ ಎರಡೂ ಧರ್ಮಗಳ ಸಾಮ್ಯತೆಯನ್ನು ಮಾತ್ರ ಹೇಳಿದ್ದಾರೆ.

"ಒಟ್ಟಾರೆ ಹೇಳಿದರೆ ಲಿಂಗಾಯುತ ಧರ್ಮಕ್ಕೂ ಕ್ರೈಸ್ತವಿಚಾರಗಳಿಗೂ ಕೆಲವು ವಿಷಯಗಳಲ್ಲಿ ಬಹು ಸಮೀಪದ ಸಾಮ್ಯವು ತೋರಿಬರುತ್ತಿರುವುದರಿಂದ ಅದರ ಅಭ್ಯಾಸವು ಇದರಲ್ಲಿ ಕೆಲಸಮಾಡುವವರಿಗೆ ಮಾತ್ರವಲ್ಲದೆ, ಈ ವಿಷಯವಾಗಿ ವಿಚಾರಿಸುವವರೆಲ್ಲರಿಗೂ ಅವಶ್ಯವಾಗಿದೆ. ಇಂತಹ ಅಭ್ಯಾಸದಿಂದ ನಾವು ನಮ್ಮ ವಿಚಾರಗಳನ್ನು ಅವರಿಗೆ ತಕ್ಕಂತೆ ತಿಳಿಸಿಕೊಡುವುದಕ್ಕೂ ಸಮರ್ಥರಾಗುತ್ತೇವೆ. ಈಗಲೇ ಹೇಳಿದ ಭಕ್ತಸ್ಥಲದಿಂದ ಐಕ್ಯಸ್ಥಲದವರೆಗೆ ಇರುವ ವಿಚಾರಗಳು ಆದರ್ಶ ರೂಪನಾದ ಯೇಸುಕ್ರಿಸ್ತನ ನಡೆನುಡಿಗಳಲ್ಲಿ ಹೇಗೆ ಸಿದ್ಧಿಗೆ ಮುಟ್ಟಿವೆ ಎಂದೂ, ಇಲ್ಲವೆ ಇಡೀ ಷಟ್‌ಸ್ಥಲವು ಯೇಸುಕ್ರಿಸ್ತನಲ್ಲಿ ಹೇಗೆ ಸಂಪೂರ್ಣತೆಯನ್ನು ಹೊಂದಿದೆ ಎಂದೂ ಬಹು ಅಂದವಾಗಿ ತೋರಿಸಬಹುದು. *(ನೋಡಿ : ರೆ. ಚೆನ್ನಪ್ಪ ಉತ್ತಂಗಿ, ಲಿಂಗಾಯತ ಧರ್ಮ ಹಾಗೂ ಕ್ರೈಸ್ತಧರ್ಮ, ಪು.48).*

ರೆ.ಉತ್ತಂಗಿಯವರು ವಿವರಿಸಿರುವ ಎರಡೂ ಧರ್ಮಗಳಲ್ಲಿನ ಸಮಾನ ತತ್ತ್ವಗಳೆಂದರೆ : ವಚನಸಾಹಿತ್ಯದಲ್ಲಿ ಕ್ರೈಸ್ತಮತ ವಿಚಾರ ಬಂದಿಲ್ಲದ ಕಾರಣ ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕಕ್ಕೆ ಕ್ರೈಸ್ತಮತ ಬಂದೇ ಇರಲಿಲ್ಲವೆಂಬ ನಿರ್ಧಾರಕ್ಕೆ ಬರುವುದು ಸರಿಯಲ್ಲ. ಅಂಥ ಒಂದು ನಿರ್ಧಾರವನ್ನು ಕೈಗೊಳ್ಳುವಾಗ ಕೇವಲ ಬಸವಣ್ಣನವರ ಸಾಹಿತ್ಯವನ್ನು ಅವಲೋಕಿಸಿದರೆ ಮಾತ್ರ ಸಾಲದು, ಬದಲು ವಚನಯುಗದ ಎಲ್ಲಾ ಸಾಹಿತ್ಯವನ್ನೂ ಶೋಧಿಸಬೇಕಾಗುತ್ತದೆ.

ಬಿಷಪ್ ಎನ್.ಸಿ.ಸಾರ್ಜೆಂಟ್ ಎಂಬುವರು ನೆಸ್ಟೋರಿಯನ್ ಕ್ರೈಸ್ತರನ್ನು ಕುರಿತು ಮಾತನಾಡುತ್ತಾ ವೀರಶೈವ ಧರ್ಮೀಯರಲ್ಲಿ ಕ್ರೈಸ್ತರ ಬೋಧನೆಯ ಸಾರ ಸರ್ವಸ್ವವು ಕಂಡುಬರುತ್ತದೆ ಎಂದೂ, ವಿಶೇಷವಾದ ಪರಿಶ್ರಮ ಹಾಗೂ ವಿದ್ವತ್ಪೂರ್ಣ ಅಧ್ಯಯನದಿಂದ ಬಹಳ ಮುಖ್ಯ ಹಾಗೂ ಕುತೂಹಲ ಪೂರಿತವಾದ ಈ ವಿಷಯವನ್ನು ತಿಳಿದುಕೊಳ್ಳಬೇಕಾಗುತ್ತದೆ ಎಂದಿದ್ದರು. ಡಾ. ಫ.ಗು.ಹಳಕಟ್ಟಿ ಅವರು ಕ್ರೈಸ್ತಧರ್ಮಕ್ಕೆ ಸಂಬಂಧಿಸಿದ 250 ವಚನಗಳನ್ನು ಗುರುತ್ತಿಸಿದ್ದಾರೆ. ಉದಾ :

*ಪಡುವಣ ದೇಶದಿಂದ ಒಡೆಯ ತಾ ಬರುತ್ತಾನೆ*
*ಬಡಗಿಯ ಹುಡುಗಿಯಲ್ಲಿ ಜನಿಸಿ ಲೋಕದ*
*ಕಡದು ಬಳದುಗಳೆಲ್ಲಾ ಸಮ ಮಾಡುತ*
*ಮರ್ತ್ಯದ ಹುಡುಗ ಮಾನವರೇನು ಬಲ್ಲರು, ಬಸವಣ್ಣ ॥*

*ಹರನೇ ಬಡಗಿಯವನಾಗಿ ನರರೂಪವನು ತಾಳಿ*
*ಸರ್ವಕಾರ್ಯಕ್ಕೆ ಉಪದೇಶ ಕೊಟ್ಟಂಥ*
*ಗುರುವಿನ ಮುಂದೆ ಗುರುವಿಲ್ಲ, ಬಸವಣ್ಣ ॥*

ಎಂಬ ಕಾಲಜ್ಞಾನದಂಥ ಈ ವಚನಗಳನ್ನು ಶ್ರೀ ಕೋಡುಗಲ್ಲುಮಠ ಅವರ ರಚನೆಯೆಂದು ಫಾ. ಅಂತಪ್ಪ ಅಭಿಪ್ರಾಯಪಡುತ್ತಾರೆ. ವಾಸ್ತವವಾಗಿ ಇವು 15–16ನೇ ಶತಮಾನದಲ್ಲಿ ಕೋಡೆಕಲ್ಲು ಬಸವಣ್ಣನ ಭಕ್ತರಿಂದ ರಚಿಸಲ್ಪಟ್ಟು ಬಾಯಿಂದ ಬಾಯಿಗೆ ಬೆಳೆದುಕೊಂಡು ಬಂದಂಥವು. ಕೋಡೆಕಲ್ಲು ಬಸವಣ್ಣ ಮತ್ತು ತಿಂತಣಿ ಮೋನಪ್ಪಯ್ಯರ ಶಿಷ್ಯರಲ್ಲಿ ಹಿಂದೂ ಮುಸ್ಲಿಂ ಭಕ್ತರಿದ್ದು ಪರಾಕು ಹಾಕುವ (ಬಿರುದಾವಳಿ ಹಾಕುವುದು) ಸಂಪ್ರದಾಯ ಅಂದು ರೂಢಿಯಲ್ಲಿತ್ತು. ಇದರಿಂದ ಪ್ರಭಾವಿತರಾಗಿ ಕ್ರಿಸ್ತನ ಭಕ್ತರು ಈ ವಚನಗಳನ್ನು ಕಟ್ಟಿ ಹಾಡಿ ರೂಢಿಗೆ ತಂದರು.

ಮತ್ತೊಂದು ವಿಚಾರವನ್ನು ಇಲ್ಲಿಯೇ ಹೇಳಿಬಿಡುವುದು ಒಳ್ಳೆಯದು. ಸುಮಾರು 16ನೆಯ ಶತಮಾನದಲ್ಲಿ ಬಂದುಹೋದ ದಾಸಪಂಥದವರೂ ಕ್ರೈಸ್ತಮತ ಕುರಿತು ಒಂದು ಪ್ರಸ್ತಾಪವನ್ನೂ ಮಾಡಿಲ್ಲ. ಹಿಂದೂಧರ್ಮದ ಪುನರುದ್ಧಾರವೇ ಇವರ ಮುಖ್ಯ ಉದ್ದೇಶವಾಗಿದ್ದು ಹಿಂದೂ ಧರ್ಮಸಾರದ ಮಹತ್ವವನ್ನೇ ಹೇಳಿದರು. ಹಿಂದೂ ಧರ್ಮಕ್ಕೆ ಮಾರಕವಾದ ಯಾವ ಧರ್ಮವನ್ನೂ ಇವರ್ಯಾರೂ ಹೀಗಳಿದಿಲ್ಲ. ಇದು ಹರಿದಾಸ ಪಂಥದವರ ಉದಾರ ಮನೋಭಾವಕ್ಕೆ ಧರ್ಮಸಹಿಷ್ಣುತೆಗೆ ಹಿಡಿದ ಕೈಗನ್ನಡಿ.

ಒಟ್ಟಿನಲ್ಲಿ ದಾಸಪಂಥದವರಾಗಲಿ, ವಚನಪಂಥದವರಾಗಲಿ ಕ್ರೈಸ್ತಮತವನ್ನು ಹೊಗಳುವ-ತೆಗಳುವ ಕೆಲಸವನ್ನು ಮಾಡಿಲ್ಲ ಎಂದ ಮಾತ್ರಕ್ಕೆ ಕ್ರೈಸ್ತಮತ ಇವರ ತೆಗಳಿಕೆಗೆ ಸಿಕ್ಕದ ಶ್ರೇಷ್ಠವಾದ ಮತ ಎಂದು ಅರ್ಥವಲ್ಲ. ಎಲ್ಲಾ ಮತಗಳಂತೆ ಕ್ರೈಸ್ತಮತವೂ ಒಂದು. ಅವರವರ ಮತ ಅವರವರಿಗೆ ದೊಡ್ಡದು. ಹಾಗೆಂದು ಅನ್ಯಮತ ಗಳು ಕೀಳಲ್ಲ ಎಂದು ತಿಳಿಯುವ ವಿಶಾಲ ಪ್ರವೃತ್ತಿ ನಮ್ಮೆಲ್ಲರಲ್ಲೂ ಬೆಳೆಯಬೇಕು. ಈ ಪಂಥಗಳು ಕ್ರೈಸ್ತಧರ್ಮ ಕುರಿತು ಆಯಾ ಯುಗದಲ್ಲಿ ಎಲ್ಲೂ ನೇರವಾಗಿ ವ್ಯಕ್ತಪಡಿಸಿಲ್ಲ ಎಂದ ತಕ್ಷಣ ಆ ಯುಗದಲ್ಲಿ ಕ್ರೈಸ್ತಧರ್ಮ ಕರ್ನಾಟಕದಲ್ಲಿ ಇರಲಿಲ್ಲವೆಂದೂ ಅರ್ಥವಲ್ಲ.

14ನೇ ಶತಮಾನದ ಪೂರ್ವಾರ್ಧದಲ್ಲಿ ಕನ್ನಡ ಜಿಲ್ಲೆಗಳಿಗೆ ಕ್ರೈಸ್ತಧರ್ಮ ಕಾಲಿಟ್ಟಿರಬೇಕು ಎಂಬುದಾಗಿ ಸವೆರಿನ್ ಸಿಲ್ವಾ ಅವರು ತಮ್ಮ 'ಕೆನರ ಜಿಲ್ಲೆಗಳ ಕ್ರೈಸ್ತಧರ್ಮದ ಇತಿಹಾಸ' (History of Christianity in Canara) ಎಂಬ ಪುಸ್ತಕದಲ್ಲಿ ಸಮರ್ಥಿಸುತ್ತಾರೆಯಾದರೂ, ಈ ಹಿಂದೆ ಒಂದೆರಡು ಶತಮಾನಗಳ ಮೊದಲೇ ಕ್ರೈಸ್ತರು ಈ ಪ್ರದೇಶದಲ್ಲಿ ಇದ್ದಿರಬೇಕು ಎನ್ನುತ್ತಾರೆ.

"...... But certain indications point out that Christians existed in Canara at the principal commerical emporiums Mangalore and Anjediva." *(ನೋಡಿ : Severine Silva, History of Christianity in Canara, Vol 1, P. 43).*

ಅಂದು ವ್ಯಾಪಾರ ಕೇಂದ್ರಗಳಾಗಿದ್ದ ಮಂಗಳೂರು ಹಾಗೂ ಅಂಜೆದೀವಗಳಲ್ಲಿ ಕ್ರೈಸ್ತರು ಹತ್ತು-ಹನ್ನೊಂದನೇ ಶತಮಾನಕ್ಕಾಗಲೇ ಇದ್ದಿರಬಹುದೆಂದು ಪರೋಕ್ಷವಾಗಿ ಸಿಲ್ವಾ ಅವರು ಒಪ್ಪಿಕೊಳ್ಳುತ್ತಾರೆ. ಸುಮಾರು 1493ರಲ್ಲಿ ಮಂಗಳೂರಿನ ಸಮುದ್ರದಲ್ಲಿ ಬೆಸ್ತರಿಗೆ ನಾನಾಭರಣಗಳಿಂದ ಶೃಂಗರಿಸಿದ ಓಲಿವ್ ಮರದ ಒಂದು ಶಿಲುಬೆ ಸಿಕ್ಕಿ ತೆಂದೂ, ಅವರು ಅದನ್ನು ಬಂಗಾಳದರಸನಿಗೆ ಬಳುವಳಿಯಾಗಿ ಕೊಟ್ಟರೆಂದೂ; ಆಮೇಲೆ 1661ರಲ್ಲಿ ಮಿನೆಲ್ ದೆ ಅಲ್ಮೇಡಾ ಎಂಬ ಗೋವಾದ ಪ್ರಜೆಯೊಬ್ಬ ಆ ಶಿಲುಬೆಯನ್ನು ಬಂಗಾಳದ ಅರಸು ಮನೆತನದವರಿಂದ ವಾಪಸ್ಸು ಪಡೆದುಕೊಂಡು ಬಂದನೆಂದೂ ಹೇಳುತ್ತಾರೆ.

ಕ್ರಿ.ಶ.325ರಿಂದ 999ರವರೆಗೆ ಕರ್ನಾಟಕವನ್ನು ತಲಕಾಡಿನ ಗಂಗರು ಆಳಿದರು. ಇವರಲ್ಲಿ ಬಹಳ ಮುಖ್ಯರಾದವರೆಂದರೆ ಅವಿನೀತ, ದುರ್ವಿನೀತ ಮತ್ತು ಶ್ರೀಪುರುಷ. ಇವರ ಆಳ್ವಿಕೆಯಲ್ಲಿ ದಕ್ಷಿಣ ಕರ್ನಾಟಕ, ಆಂಧ್ರಪದೇಶ ಮತ್ತು ತಮಿಳುನಾಡು ಕರ್ನಾಟಕ ಕ್ಕೆ ಸೇರಿತ್ತು. ಆದ್ದರಿಂದ ತಮಿಳುನಾಡಿಗೆ ಬಂದ ಕ್ರೈಸ್ತಮತ ಕರ್ನಾಟಕಕ್ಕೂ ಸರಿ ಸಮಾನ ಅದೇ ಕಾಲದಲ್ಲಿ ಬಂದಿರಬೇಕು ಎಂಬುದು ಹಲವು ಚರಿತ್ರೆಕಾರರ ಅನ್ನಿಸಿಕೆಯಾಗಿದೆ.

ಮೇಲಿನ ಹೇಳಿಕೆಗಳನ್ನು ನಾವು ಅಲ್ಲಗೆಳೆದರೆ ಮುಂದೆ ಕರ್ನಾಟಕ ಕ್ರೈಸ್ತರ ಇತಿಹಾಸವನ್ನು ಕ್ರಿ.ಶ. 1328ರಿಂದ ಸ್ಪಷ್ಟವಾಗಿ ಗುರುತಿಸಬಹುದು. ಬಹುಮತಾ

ಭಿಪ್ರಾಯಕ್ಕೆ ನಾವು ತಲೆಬಾಗಿದರೆ ಆರನೇ ಶತಮಾನದಿಂದ ಹದಿನಾಲ್ಕನೇ ಶತಮಾನದವರೆಗಿನ – ಅಂದರೆ ಸರಿಸುಮಾರು ಎಂಟು ಶತಮಾನಗಳ ಕಾಲದ ಕ್ರೈಸ್ತರ ಇತಿಹಾಸ ಕನ್ನಡಿಗರಿಗೆ ದೊರೆಯುವುದಿಲ್ಲ. ಈ ಎಂಟು ಶತಮಾನಗಳ ಅಜ್ಞಾತ ಕಾಲದಲ್ಲಿ ಕ್ರೈಸ್ತರ ಚಟುವಟಿಕೆ, ವಿಚಾರ ಸ್ಪಷ್ಟವಾಗಿ ಎಲ್ಲಿಯೂ ಕಾಣಸಿಕೊಳ್ಳುವುದಿಲ್ಲ. ಈ ಒಂದು ಅವಧಿಯನ್ನು ನಾವು 'ಕತ್ತಲೆಯುಗ' ಎನ್ನಬಹುದೇನೊ? 'ಕತ್ತಲೆಯುಗ'ಕ್ಕೆ ಕಾರಣಗಳು ಹತ್ತು ಹಲವು ಸಿಕ್ಕುತ್ತವೆ.

ಮಲಬಾರಿನಲ್ಲಿ ಸಂತ ಥೋಮಸನು ಮತಪ್ರಚಾರ ಮಾಡಿದ ಮೇಲೆ ಹೊಸ ಕ್ರೈಸ್ತರ ಅಧ್ಯಾತ್ಮಿಕ ಚಟುವಟಿಕೆಗಳಿಗೆ ಯಾರನ್ನೂ ನೇಮಿಸದೆ, ಚೀನಾ ದೇಶಕ್ಕೆ ಹೊರಟು ಹೋಗುತ್ತಾನೆ. ಆಮೇಲೆ ಶತಮಾನಗಳೇ ಕಳೆದ ಮೇಲೆ ಥೋಮಸನು ಬಂದು ಅವರಲ್ಲಿ ಸತ್ತಿದ್ದ ಮತಸ್ವಾಭಿಮಾನವನ್ನು ಮತ್ತೆ ಬಡಿದೆಬ್ಬಿಸಿದನೆಂಬುದಾಗಿ ತಿಳಿದು ಬರುತ್ತದೆ. ಇದೇ ರೀತಿ ಕರ್ನಾಟಕದಲ್ಲೂ ಮತಬೋಧನೆ ಮಾಡಿ ಕಣ್ಮರೆಯಾಗಿಬಿಡುತ್ತಾರೆ. ಹಾಗಾಗಬೇಕೆಂದು ಅವರೆಂದೂ ಬಯಸಿರಲಿಲ್ಲ. ಆದರೆ ಮತಬೋಧನೆಯ ಹುಮ್ಮಸ್ಸು ಅವರನ್ನು ಮತ್ತೊಂದು ದೇಶಕ್ಕೋ, ನಾಡಿಗೋ ಕರೆದೊಯ್ಯುತ್ತಿತ್ತು. ಒಮ್ಮೆ ಹಾಗೆ ಹೋದರೆಂದರೆ ಅವರು ತಿರುಗಿ ಬರುವುದೇ ಅಪರೂಪವಾಗಿತ್ತು. ಅವರು ಬರೆದ ಪತ್ರಗಳು ರೋಮ್ ನಗರವನ್ನು ತಲುಪಲು ವರ್ಷಗಳೇ ಹಿಡಿಯುತ್ತಿತ್ತು. ಈ ಕಾರಣದಿಂದ ಮತಪ್ರಚಾರ ಆಗಿರುವ ಪ್ರದೇಶಗಳಿಗೆ ಬೇರೆ ಗುರುಗಳನ್ನು ಕಳಿಸುವುದಕ್ಕೆ ಹತ್ತಾರು ವರ್ಷಗಳೇ ಕಳೆದುಹೋಗುತ್ತಿದ್ದವು. ಜೊತೆಗೆ ಆಗಷ್ಟೇ ಕ್ರೈಸ್ತಮತ ಅಂಕುರಿಸಿದ್ದು, ಒಳಗೊಳಗೇ ಅನೇಕಾನೇಕ ಯುದ್ಧಗಳನ್ನು, ಮತೀಯ ಗಲಭೆಗಳನ್ನು ಎದುರಿಸಿಕೊಂಡು 'ಧರ್ಮಸಭೆ'ಯನ್ನು ಕಟ್ಟುತ್ತ ಕೇವಲ ಬೆರಳೆಣಿಕೆಯಷ್ಟಿದ್ದ ಗುರುಗಳನ್ನು ಇಂಥ ಕಡೆಗೆ ಕಳುಹಿಸಬೇಕಾಗುತ್ತಿತ್ತು. ಎಷ್ಟೋ ಸಾರಿ ಗುರುಗಳು ಹೊರಟು ಮಾರ್ಗ ಮಧ್ಯೆ ದುರಂತಕ್ಕೋ, ರೋಗಕ್ಕೋ ತುತ್ತಾಗುತ್ತಿದ್ದುದೂ ಉಂಟು. ಈ ಏನೆಲ್ಲ ಕಾರಣಗಳಿಂದ ಕರ್ನಾಟಕದಲ್ಲಿ ಎಂಟು ಶತಮಾನಗಳ ಕಾಲ ಕತ್ತಲಾವರಿಸಿತು. ಅಂದ ಮಾತ್ರಕ್ಕೆ ಆ ಎಂಟುನೂರು ವರ್ಷಗಳ ಕಾಲ ಕನ್ನಡ ನಾಡಿನಲ್ಲಿ ಕ್ರೈಸ್ತ ಸಂತತಿಯೇ ಇರಲಿಲ್ಲವೆಂದು ಅರ್ಥವಲ್ಲ. ಕ್ರೈಸ್ತ ಕುಟುಂಬಗಳಿದ್ದವು. ಆದರೆ ಅವು ಜ್ಞಾನ ನಿರ್ದೇಶನವಿಲ್ಲದೆ, ನೇರದಾರಿ ತೋರುವವರಿಲ್ಲದೆ ಸೊರಗಿ ಹೋಗಿದ್ದವು. ತಮ್ಮ ಚರಿತ್ರೆಯನ್ನೇ ತಾವು ತಿಳಿಯದೆ; ಪರಂಪರೆ, ಸಂಸ್ಕೃತಿ ಇಲ್ಲದೆ ತಮ್ಮನ್ನು ತಾವೇ ಗುರುತಿಸಿಕೊಳ್ಳಲಾಗದ ದುಃಸ್ಥಿತಿಯಲ್ಲಿದ್ದರು.

1400ರ ಹೊತ್ತಿಗೆ ಕ್ರೈಸ್ತಧರ್ಮ ಕರ್ನಾಟಕದಲ್ಲಿ ತನ್ನ ಅಸ್ತಿತ್ವವನ್ನು ಕರಾರುವಕ್ಕಾಗಿ ಸ್ಥಾಪಿಸಿತು. ಮೊತ್ತಮೊದಲು ಬಂದ ಮಿಷನರಿಗಳೆಂದರೆ : ಡೊಮಿನಿಕ್ಕನರು, ಅಗುಸ್ಟಿನಿಯನ್ನರು, ಫ್ರಾನ್ಸಿಸ್ಕನ್ನರು ಮತ್ತಿತರ ಮಿಷನ್‌ಗಳು.

ಹೀಗೆ ಕರ್ನಾಟಕವನ್ನು ಅಂದು ಆಡಳಿತಾನುಕೂಲದ ದೃಷ್ಟಿಯಿಂದ ಮೂರು ಮಿಷನ್‌ಗಳನ್ನಾಗಿ ಮಾಡಿಕೊಳ್ಳಲಾಗಿತ್ತು. ಅವು ಕ್ರಮವಾಗಿ ಕೆನರಾ ಮಿಷನ್ (1534),

ಮೈಸೂರು ಮಿಷನ್ (1648) ಮತ್ತು ಕರ್ನಾಟಕ ಮಿಷನ್ (1700). ಪೋರ್ಚುಗಿಸ್ ರಾಷ್ಟ್ರದ ಅಧೀನದಲ್ಲಿದ್ದ ಕರ್ನಾಟಕ ಮಿಷನ್ ಅಂದು ಪಾಂಡುಚೇರಿ ಪ್ರಾಂತ್ಯಕ್ಕೆ ಸೇರಿತ್ತು. ಅದು ಕ್ರಮೇಣ ಫ್ರೆಂಚ್ ರಾಷ್ಟ್ರಾಧೀನಕ್ಕೆ ಸೇರಿಕೊಂಡು ಇಂದಿನ ಕನ್ನಡ ಪ್ರದೇಶಗಳಾದ – ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಗೌರಿಬಿದನೂರು ಮುಂತಾದ ಕಡೆ ಕೆಲಸ ಮಾಡಿದೆ.

ಅನಂತರ ಹದಿನಾರನೇ ಶತಮಾನದಿಂದ ಹದಿನೆಂಟನೇ ಶತಮಾನದ ಅವಧಿಯಲ್ಲಿ ಕರ್ನಾಟಕದಾದ್ಯಂತ ಕಥೋಲಿಕ ಕ್ರೈಸ್ತರ ಪ್ರಾಬಲ್ಯ ಬೆಳೆಯುತ್ತಿದ್ದಂತೆ ಪ್ರೊಟೆಸ್ಟೆಂಟ್ ಕ್ರೈಸ್ತ ಮಿಷನರಿಗಳು ಕರ್ನಾಟಕವನ್ನು ಪ್ರವೇಶಿಸಿದರು. ಬ್ರಿಟಿಷ್ ಈಸ್ಟ್ ಇಂಡಿಯ ಕಂಪನಿಯವರು 1813ರಲ್ಲಿ ಅಂಗೀಕರಿಸಿದ ಒಂದು ನಿರ್ಣಯದ ಪರಿಣಾಮವಾಗಿ ಬ್ರಿಟಿಷರ ಆಳ್ವಿಕೆಯಲ್ಲಿದ್ದ ಭಾರತದಲ್ಲಿ ಮಿಷನರಿ ಚಟುವಟಿಕೆಗೆ ಮುಕ್ತಾವಕಾಶ ದೊರೆಯಿತು. ಲಂಡನ್ ಮಿಷನ್, ಬಾಸೆಲ್ ಮಿಷನ್, ವೆಸ್ಲಿಯನ್ ಮಿಷನ್ ಮುಂತಾದ ಮಿಷನ್‌ಗಳು ಕರ್ನಾಟಕದಲ್ಲಿ ಕ್ರೈಸ್ತಧರ್ಮವನ್ನು ಪ್ರಚಾರ ಮಾಡಿದವು.

ಇಂದು ಇಡೀ ಕರ್ನಾಟಕದಲ್ಲಿ ಹತ್ತು ಕಥೋಲಿಕ ಧರ್ಮಕ್ಷೇತ್ರಗಳು ಇವೆ. ಅವು :

1. ಬೆಂಗಳೂರು ಮಹಾಧರ್ಮಕ್ಷೇತ್ರ (1940)
2. ಮೈಸೂರು ಧರ್ಮಕ್ಷೇತ್ರ (1850)
3. ಮಂಗಳೂರು ಧರ್ಮಕ್ಷೇತ್ರ (1879)
4. ಬಳ್ಳಾರಿ ಧರ್ಮಕ್ಷೇತ್ರ (1928)
5. ಕಾರವಾರ ಧರ್ಮಕ್ಷೇತ್ರ (1976)
6. ಬೆಳಗಾಂ ಧರ್ಮಕ್ಷೇತ್ರ (1953)
7. ಚಿಕ್ಕಮಗಳೂರು ಧರ್ಮಕ್ಷೇತ್ರ (1963)
8. ಶಿವಮೊಗ್ಗ ಧರ್ಮಕ್ಷೇತ್ರ (1988)
9. ಉಡುಪಿ ಧರ್ಮಕ್ಷೇತ್ರ (2012)
10. ಗುಲ್ಬರ್ಗ ಧರ್ಮಕ್ಷೇತ್ರ (2002)
11. ಬೆಳ್ತಂಗಡಿ ಧರ್ಮಕ್ಷೇತ್ರ (ಸಿರೋಮಲಬಾರ್)
12. ಭದ್ರಾವತಿ ಧರ್ಮಕ್ಷೇತ್ರ (ಸಿರೋಮಲಬಾರ್)
13. ಮಂಡ್ಯ ಧರ್ಮಕ್ಷೇತ್ರ (ಸಿರೋಮಲಬಾರ್)
14. ಪುತ್ತೂರು ಧರ್ಮಕ್ಷೇತ್ರ (ಸಿರೋಮಲಬಾರ್)

ಈಗ ಕರ್ನಾಟಕದಲ್ಲಿ ಒಟ್ಟು 9,66,776 ಜನ ಕಥೋಲಿಕ ಕ್ರೈಸ್ತರಿದ್ದು, 809 ಧರ್ಮಕೇಂದ್ರಗಳು ಇವೆ. ಈ ಧರ್ಮಕೇಂದ್ರಗಳಲ್ಲಿ ಒಟ್ಟು 2099 ಜನ ಗುರುಗಳು ಇದ್ದಾರೆ.